# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ - 2014

ಪ್ರತಿ ಯಶಸ್ವಿ ನಾಯಕನ ಹಿಂದೆ
ಇನ್ನೊಬ್ಬ ನಾಯಕ ಇರುತ್ತಾನೆ
– ಹೊಸ ಗಾದೆ



# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 31
ಸಂಚಿಕೆ – 9
ಜೂನ್ – 2014

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಈಗ ಹೇಳಿ, ನಾನು...... | **ಬಿಕೆಜಿ** | 5 |
| ತೂಕದ ವ್ಯಾಖ್ಯಾನ | **ಆರತಿ ಘಟಿಕಾರ್** | 8 |
| ರಾಷ್ಟ್ರೀಯ ಗುಳುಂ... | **ಗೌತಮ** | 13 |
| ನಗುವುದಾದರೆ ನಕ್ಕು ಬಿಡಿ | **ಎಚ್.ಜಿ. ಸೋಮಶೇಖರ ರಾವ್** | 17 |
| ತುಂತುರು | **ದಂನಾಆ** | 20 |
| ಸಂಸಾರದ ಲೆಕ್ಕಾಚಾರ | **ಬೇಲೂರು ರಾಮಮೂರ್ತಿ** | 21 |
| ಯಾವ ಬಸ್ಸೋ, ಯಾವ.. | **ಎಚ್.ಆರ್. ಹನುಮಂತ ರಾವ್** | 24 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 27 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 28 |
| ಮುಗಲ ಮಾರಿಯೊಳಗ.. | **ಭೂಮಿತಾಯಿ** | 31 |
| ಮಕ್ಕಳ ಆಟದ..... | **ಇ.ಆರ್. ರಾಮಚಂದ್ರನ್** | 34 |
| Pay ಕಮೀಷನ್ | **ಜಿ.ಬಿ. ಕೋಟೆ ಅನಂತ್** | 37 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಲೋಕ ಸಭಾ ಭವನದ ಮೆಟ್ಟಿಲುಗಳ ಮೇಲೆ ಮಂಡಿಯೂರಿ ತಲೆಬಾಗಿದ ನರೇಂದ್ರರಿಗೆ ಅಪರಂಜಿಯ ಹೃತ್ಪೂರ್ವಕ ಶುಭಾಶಯಗಳು!!

★★★

ಕಾಂಗ್ರೆಸ್ಸಿನ 'ಕೈಗುಣ' ಭಸ್ಮೀಕರಣವಾಗಿದೆ!!

★★★

ಬಿ.ಎಸ್.ವೈ. ಪತ್ರಕ್ಕೆ ವರಿಷ್ಠರ ಅತೃಪ್ತಿ – ಪತ್ರಿಕೆ

**● ಹೋದೆಯಾ ಪಿಶಾಚಿ ಅಂದರೆ.... !!**

★★★

ಭಾಜಪದ ಯಶಸ್ಸಿನಲ್ಲಿ ರಾಹುಲ್ ಅವರ ಪಾತ್ರ ಹಿರಿದಾದದ್ದು ಎಂದು ಅಪರಂಜಿ ನಕ್ಕಳಂತೆ!!

★★★

ಚುನಾವಣೆ ಫಲಿತಾಂಶದ ದಿನ ಐ.ಪಿ.ಎಲ್. ಕ್ರಿಕೆಟ್ ಪಂದ್ಯಗಳನ್ನು ನೋಡಿದವರ ಸಂಖ್ಯೆ ಕಡಿಮೆಯಾಗಿತ್ತು!!

★★★

ಜನರಿಗೆ ನಮ್ಮ ಮೇಲೆ ಕೋಪ ಬಂದಿರುವ ಹಾಗೆ ಕಾಣುತ್ತದೆ – ಶ್ರೀಮತಿ ಸೋನಿಯಾ

**● ಕಠೋರ ಸತ್ಯ ಅಂದರೆ ಇದೇ !!**

★★★

ಕಾಮೆಡ್–ಕೆ ಕಛೇರಿಯ ಮೇಲೆ ಸಿ.ಸಿ.ಬಿ. ಅಕ್ರಮ ಧಾಳಿ – ಸುದ್ದಿ

**● ಚರಕ ಶುಶ್ರುತರು ಬೆಚ್ಚಿ ಬಿದ್ದರಂತೆ !!**

★★★

ಪಕ್ಷದವರಿಂದಲೇ ನಂಬಿಕೆ ದ್ರೋಹ – ಕಾಂಗ್ರೆಸ್ ಅಭ್ಯರ್ಥಿ

**● ನಂಬಿ ಕೆಟ್ಟವರಿರುವರೋ ಅನ್ನಬಹುದು ಈಗ !!**

★★★

''ನರೇಂದ್ರ ಮೋದಿ ಅಲೆ ಇಲ್ಲ'' – ಕಾಂಗ್ರೆಸ್ ವರಿಷ್ಠರು

**● ಹೌದು, ಅದು ಸುನಾಮಿ !!**

★★★

# ನಮ್ಮ ನಿಮ್ಮಲ್ಲಿ

ಅಬ್ಬ, ಕೊನೆಗೂ ಚುನಾವಣೆಯ ಫಲಿತಾಂಶ ಬಂದ ದಿನ ನನಗೆ ಒಂದು ದೊಡ್ಡ ಹೊರೆ ಇಳಿದಂತಾಯಿತು. ಬಿ.ಜೆ.ಪಿ.ಗೆ ಬಹುಮತ ಬಂದು ಮೋದಿ ಪ್ರಧಾನಿಯಾಗುವುದು ಖಚಿತ ಎಂಬುದಕ್ಕಿಂತ ರಾಹುಲ್ ಎಂಬ ಮಧ್ಯವಯಸ್ಸಿನ ವಿಚಿತ್ರ ವ್ಯಕ್ತಿಯ ನಾಯಕತ್ವದಲ್ಲಿ ದೇಶ ನರಳಬೇಕಾಗಿಲ್ಲವಲ್ಲಾ ಎಂಬ ನಿರುಮ್ಮಳತೆಯ ಸಂತಸ ಮನವನ್ನು ಅಂದು ತುಂಬಿತ್ತು. ರಾಹುಲ್ ಗಾಂಧಿಯ ಬಗ್ಗೆ ನನ್ನಲ್ಲಿ ಮಡುಗಟ್ಟುತ್ತಿದ್ದ ಭ್ರಮನಿರಸನ ಒಂದು ನಿರ್ಣಾಯಕ ಹಂತವನ್ನು ತಲುಪಿದ್ದು ರಾಹುಲ್ ಸಿ.ಐ.ಐ.ನ (ಕನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್) ವಾರ್ಷಿಕ ಸಭೆಯಲ್ಲಿ ವಿಶೇಷ ಅತಿಥಿಯಾಗಿ ಮಾಡಿದ ಭಾಷಣವನ್ನು ಕೇಳಿದ ನಂತರ.

ಅಂದು ಆತ ಅಲ್ಲಿ ಮಾಡಿದ ಭಾಷಣದ ಪ್ರಾರಂಭಿಕ ಭಾಗವನ್ನು ಇಲ್ಲಿ ಕನ್ನಡಿಸಿದ್ದೇನೆ.

''ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ಧುರೀಣರೇ ಮತ್ತು ಸ್ನೇಹಿತರೇ,

ಇಂದು ಇಲ್ಲಿ ನಿಮ್ಮ ಮುಂದೆ ಬಂದು ನಿಲ್ಲುವುದು ನನಗೊಂದು ಗೌರವದ ಸಂಗತಿ. (ಇಷ್ಟು ಹೇಳಿ ಭಾಷಣ ಮುಂದುವರಿಸಿದ್ದರೆ ಚೆನ್ನಾಗಿರ್ತಿತ್ತು. ಆದರೆ ಹಾಗಾಗಲಿಲ್ಲ) ಇದು ಏತಕ್ಕೆ ಗೌರವದ ಸಂಗತಿ ಎಂಬುದನ್ನು ನಿಮಗೆ ವಿವರಿಸಲು ಬಯಸುತ್ತೇನೆ. ನಮ್ಮ ಭಾರತ ಒಂದು ನ್ಯಾಷನಲ್ ಸ್ಟ್ರಕ್ಚರ್. (ಭಾರತ ಒಂದು ನೇಷನ್ ಅಂತ ಕೇಳಿದ್ದೆ. ಇದೇನಿದು ಈ ನ್ಯಾಷನಲ್ ಸ್ಟ್ರಕ್ಚರ್? ದೇಶದ ರೂಪದ ಕಟ್ಟಡ ಅಂತಲೇ?) ಆದರೆ ನೀವು ಸ್ವಲ್ಪ ಹಿಂದೆ ಹೋದರೆ ಅಂದರೆ ನೂರಿನ್ನೂರು ವರ್ಷಗಳಷ್ಟು ಹಿಂದೆ, (ನೂರು ವರ್ಷದ ಹಿಂದೆ ಬ್ರಿಟಿಷರು ನಮ್ಮನ್ನಾಳುತ್ತಿದ್ದರು. ಇನ್ನೂರು ವರ್ಷದ ಹಿಂದೆ ಸಹಾ) ಭಾರತ ಒಂದು ಶಕ್ತಿಯಾಗಿತ್ತು. (ಶಕ್ತಿ? ಯಾವ ರೀತಿಯ ಶಕ್ತಿ ಸ್ವಾಮಿ? ಬ್ರಿಟಿಷರ ದಾಸ್ಯದಲ್ಲಿ ನಲುಗುತ್ತಿದ್ದೆವಲ್ಲಾ ನಾವೆಲ್ಲಾ. ಮುಂದೆ ಕೇಳಿ) ಆ ಶಕ್ತಿ ನಮಗೆ ಬಂದದ್ದು ನಮ್ಮ ನದಿಗಳಿಂದ. ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಶಕ್ತಿ ದಯಪಾಲಿಸಿದ್ದಕ್ಕಾಗಿಯೇ ನಾವು ಆ ನದಿಗಳನ್ನು ಪೂಜಿಸುತ್ತಿರುವುದು. (??) ಈಗ ನಾವು ಆ ದಿನಗಳಿಂದ ಬಹು ಮುಂದೆ ಸಾಗಿದ್ದೇವೆ. ಹೊಸ ಕಟ್ಟಡಗಳನ್ನು ಕಟ್ಟಿ ಆ ಶಕ್ತಿ ಉಕ್ಕುವಂತೆ, ಸ್ಫೋಟಗೊಳ್ಳುವಂತೆ ಮಾಡಿದ್ದೇವೆ. ಆ ಉಕ್ಕಿದ ಶಕ್ತಿಯನ್ನು ........................'' ಹೀಗೆಯೇ ಸಾಗಿತ್ತು ಆ ಮಧ್ಯವಯಸ್ಕನ ಭಾಷಣ.

ಭಾಷಣದ ನಂತರ ಪ್ರಶ್ನೆ ಉತ್ತರಗಳ ಸಮಯ.

ಒಬ್ಬ ಕೈಗಾರಿಕಾ ಧುರೀಣರು, ''ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅನೇಕ ಬಾರಿ ಸಮನ್ವಯ ಸರಿ ಹೊಂದದಿರುವುದರಿಂದ ವಾಣಿಜ್ಯ ವ್ಯವಹಾರಗಳು

ತೊಂದರೆಗೀಡಾಗುತ್ತವೆ. ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುವಿರಾ?'' ಅಂತ ಬಹು ವಿನಯದಿಂದ ಕೇಳಿದರು. ಭಾಷಣವನ್ನು ಆಗತಾನೆ ಕೇಳಿದ್ದ ನನಗೆ ಇನ್ನೇನು ಪೆಚ್ಚು ಮಾತುಗಳು ಹೊರಬರುತ್ತವೋ ಅಂತ ಒಳಗೊಳಗೇ ನಡುಕ ಶುರುವಾಯಿತು. ನನ್ನ ಹೆದರಿಕೆ ನಿಜವಾಯಿತು.


''ಈ ಪ್ರಶ್ನೆಗೆ ನಾನು ನಿಮಗೆ ರಾಜಕೀಯ ಉತ್ತರ ನೀಡಬೇಕೋ ಅಥವಾ ಸ್ಟ್ರಕ್ಚರಲ್ (ಪುನಃ ಇದೆಲ್ಲಿ ಬಂತಪ್ಪಾ ಈ ಕಟ್ಟಡ!) ಉತ್ತರ ನೀಡಬೇಕೋ ಅದನ್ನು ಮೊದಲು ಹೇಳಿ'' ಅಂತ ರಾಹುಲ್ ಹೇಳಿದ್ದನ್ನು ಕೇಳಿ ಒಂದು ಕ್ಷಣ ಧುರೀಣರು ಅವಾಕ್ಕಾದರು. ಆಮೇಲೆ ಚೇತರಿಸಿಕೊಂಡು ''ನೀವು ಸತ್ಯವಾದ ಉತ್ತರವನ್ನು ತಿಳಿಸಿದರೆ ಸಾಕು'' ಅಂದದ್ದಕ್ಕೆ ರಾಹುಲ್ ''ಎರಡೂ ಸತ್ಯವಾದ ಉತ್ತರಗಳೇ. ಆದರೆ ಬೇರೆ ಬೇರೆ ಸತ್ಯಗಳು ಅವು'' ಎಂದು ಬಿಡೋದೇ.

ಧುರೀಣರು ''ನನ್ನ ತಿಳುವಳಿಕೆಯಲ್ಲಿ ಸತ್ಯ ಯಾವಾಗಲೂ ಒಂದೇ. ಅದಕ್ಕೇ ಅದನ್ನು ಸತ್ಯ ಎನ್ನುವುದು'' ಅಂತ ಧೈರ್ಯವಾಗಿ ಹೇಳಿದರು. ಅದಕ್ಕೆ ರಾಹುಲ್ ''ಹಾಗಾದರೆ ಸರಿ'' ಎಂದು ಹೇಳಿ ಸುಮ್ಮನಾದರು.

ನಾನು ತಡೆಯಲಾರದೇ ಟಿ.ವಿ. ಆರಿಸಿ ಹೊರಕ್ಕೆ ನಡೆದೆ. ಇದೆಲ್ಲಿಂದ ಬಂದು ತಗುಲಿಕೊಂಡನಪ್ಪಾ ಈ ಬೆಪ್ಪುಲಾಷ್ಟಕ ನಮ್ಮ ದೇಶಕ್ಕೆ ಎಂಬ ಚಿಂತೆ ಭಗವಂತನ ಅನುಗ್ರಹದಿಂದ ಈ ಚುನಾವಣೆಯಲ್ಲಿ ಪರಿಹಾರವಾಯಿತು. ಇನ್ನು ಐದು ವರ್ಷದ ನಂತರ ಪುನಃ ಬರಲ್ಲಾ ಅಂತ ಯಾವ ಗ್ಯಾರಂಟಿ ಅಂತ ನೀವು ಕೇಳಬಹುದು. ಐದು ವರ್ಷ ಬಹಳ ದೂರ ಇದೆ ಸ್ವಾಮಿ. ಹಿರಿಯ ಪ್ರಜೆಗಳಾದ ನಮಗೆ ಅದರ ಚಿಂತೆಯೇ ಇಲ್ಲ. ಪುನಃ ಆತ ಬಂದರೆ ಅದು ನಿಮ್ಮ ಹಣೇಬರಹ!

**ಶಿವಕುಮಾರ್**

---



# ಈಗ ಹೇಳಿ, ನಾನು ದುರ್ಬಲನೇ?

**– ಬಿಕೆಜಿ**

**ಈ** ನಾಡಿನ ಧೀಮಂತ ಇತಿಹಾಸಕಾರರಿಗೆ,

ಭಾರತದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ನ ನಲ್ಮೆಯ ನಮಸ್ಕಾರಗಳು.

ನಾನು ಒಂದು ಮಾತನ್ನು ಅವತ್ತು ಪ್ರೆಸ್‌ಮೀಟ್‌ನಲ್ಲಿ ಹೇಳಿದ್ದೆ: ''ಚರಿತ್ರೆ ನನ್ನ ಬಗ್ಗೆ ಕರುಣೆ ತೋರಿಸಲಿ'' ಎಂದು. ಆ ಮಾತು ಎಷ್ಟು ಮಂದಿ ಇತಿಹಾಸಕಾರರ ಗಮನಕ್ಕೆ ಬಂದಿದೆಯೋ ತಿಳಿಯದು. ಆದರೆ, ಈ ನನ್ನ ಪತ್ರವನ್ನು ಓದಿಯಾದರೂ ನಮ್ಮ ನಡುವಿನ ಧೀಮಂತ ಇತಿಹಾಸಕಾರರು ನನ್ನ ಬಗ್ಗೆ ಸ್ಪಷ್ಟವಾದ ಹಾಗೂ ನಿಷ್ಪಕ್ಷಪಾತವಾದ ನಿಲುವನ್ನು ತಳೆಯಬಹುದು ಎನ್ನುವ ನಿರೀಕ್ಷೆ ನನ್ನದು.

ನಾನು ಇತಿಹಾಸಕಾರರಿಗೇ ಯಾಕೆ ಪತ್ರ ಬರೆಯುತ್ತಿದ್ದೇನೆ ಎನ್ನುವ ಪ್ರಶ್ನೆ ಬಹುಶಃ ನಿಮ್ಮದ್ದಿರಬಹುದು. ನನ್ನ ಜೀವಿತಾವಧಿಯಲ್ಲಿ ನಾನು ಈವರೆಗೆ ಮಾಡಿದ್ದ ಸಾಧನೆಯನ್ನು ದಾಖಲಿಸುವವರು ನೀವೇ, ನನ್ನ ವೈಫಲ್ಯವನ್ನು ಎತ್ತಿ ಹೇಳಿ ಹೊಂಡಕ್ಕೆ ಉರುಳಿಸುವವರೂ ನೀವೇ. ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಮಾತ್ರ ಇತಿಹಾಸದಲ್ಲಿ ನಾನು ಹೇಗೆ ಉಳಿದುಕೊಳ್ಳುತ್ತೇನೆ ಎನ್ನುವುದು ಖಚಿತವಾಗುತ್ತದೆ. ಹಾಗಾಗಿ ಈ ಪತ್ರ.

**ಅಪರಂಜಿಗೆ ಮಾತ್ರ ಈ ಪತ್ರ ದಕ್ಕಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇವೆ.**

ನನ್ನನ್ನು ವಿರೋಧಿಗಳು, ಮಾಧ್ಯಮದವರು ಮೌನಿ, ದುರ್ಬಲ ಎಂದೆಲ್ಲ ಹೀಗಳೆದಾಗ ನನ್ನ ಜತೆಗೆ ಗಟ್ಟಿಯಾಗಿ ಇದ್ದದ್ದು ನಾನು ಮಾತ್ರ. ನನ್ನೆಲ್ಲಾ ನೋವುಗಳನ್ನು ನಾನೊಬ್ಬನೇ ನುಂಗಿ ನುಂಗಿ ಸಾಕಾಗಿದೆ. ಅವತ್ತು ರಾಹುಲ್ ಗಾಂಧಿ ನಾನ್‌ಸೆನ್ಸ್ ಎಂದು ಹೀಗಳೆದು ವಿಧೇಯಕವನ್ನು ಬಹಿರಂಗವಾಗಿ ಹರಿದಾಗ ನಾನು ಇಡೀ ರಾತ್ರಿ ನಿದ್ದೆ ಮಾಡಿಲ್ಲ. ಇದು ನನಗೆ ಮತ್ತು ನನ್ನ ಜತೆಗೆ ಒದ್ದೆಯಾದ ದಿಂಬಿಗೆ ಮಾತ್ರ ಗೊತ್ತು. ಮಾತನಾಡಬಾರದು ಎಂದು ಬಾಯಿಗೆ ಬಟ್ಟೆ ಕಟ್ಟಿದವರು ಅವರಮ್ಮ; ಕೈಸಿಕ್ಕಿದ್ದನ್ನು ಹರಿದು ಹಾಕಿದವರು ಮಗ. ಇವರಿಬ್ಬರ ನಡುವೆ ಅಪ್ಪಚ್ಚಿಯಾದವನು ಈ ಸರ್ದಾರ್‌ಜಿ.

ಯಾರಿಗೂ ಗೊತ್ತಿಲ್ಲದ ಕೆಲವು ವಿಚಾರಗಳನ್ನು ನಾನು ನಿಮ್ಮ ಜತೆ ಹೇಳುತ್ತೇನೆ. ಇತಿಹಾಸದಲ್ಲಿ ದಾಖಲಿಸಬೇಕೋ, ಬೇಡವೋ ಎನ್ನುವುದು ನಿಮಗೆ ಬಿಟ್ಟ ವಿಚಾರ.

ನನಗೆ ಡೈಲಿ ಮೂರು ಫೋನ್ ಕರೆಗಳು ಬರುತ್ತಿದ್ದವು. ಆ ಮೂರೂ ಕರೆಗಳು ಒಂದೇ ಫ್ಯಾಮಿಲಿಯಿಂದ, ಒಂದೇ ಮನೆಯಿಂದ. ಬೆಳಿಗ್ಗೆ 8 ಗಂಟೆಗೆ ಅಮ್ಮನ ಫೋನ್. ಫೋನ್ ಎತ್ತಿದ ಕೂಡಲೇ ಹಲೋ ಮ್ಯಾಮ್ ಎನ್ನುತ್ತಿದ್ದೆ.

ಅತ್ತ ಕಡೆಯಿಂದ ಅವರು, ನನ್ನ ಇಂದಿನ ಕಾರ್ಯಕ್ರಮವನ್ನು ತಿಳಿದುಕೊಳ್ಳುತ್ತಿದ್ದರು. ನಾನು ಅವತ್ತು ನಾನು ಭಾಗವಹಿಸಬೇಕಾಗಿದ್ದ ಕಾರ್ಯಕ್ರಮದ ಪಟ್ಟಿಯನ್ನು ಮುಂದಿಡುತ್ತಿದ್ದೆ. ಅಲ್ಲಿ, ನಾನು ಏನು ಮಾತಾಡಬೇಕು, ಏನು ಮಾತನಾಡಬಾರದು ಎಂದು ಪಟ್ಟಿ ಮಾಡಿಕೊಡುತ್ತಿದ್ದರು. ಹಾಗೆಂದು ನನ್ನನ್ನು ಅವರು ಕಂಟ್ರೋಲ್ ಮಾಡುತ್ತಿದ್ದರು ಎಂದು ನಾನು ಹೇಳಲಾರೆ.

ಮಧ್ಯಾಹ್ನದ ಹೊತ್ತಿಗೆ ಅಳಿಯನ ಫೋನ್. ನನ್ನನ್ನು ತುಂಬಾ ಗೌರವದಿಂದ ಕಾಣುತ್ತಿದ್ದ ಅಳಿಯ, ನನ್ನನ್ನು ಒಬ್ಬ ಗೌರವಾನ್ವಿತ ಎಕಾನಾಮಿಸ್ಟ್ ಎಂದು ಪರಿಗಣಿಸುತ್ತಿದ್ದರು. ಅವರ ವ್ಯವಹಾರದ ವಿಷಯಗಳನ್ನು ಪ್ರಸ್ತಾಪಿಸಿ, ಅಂದು ಎಲ್ಲಿ ಹಣ ಹೂಡಿದರೆ ಉತ್ತಮ ಎಂದು ಕೇಳುತ್ತಿದ್ದರು. ಪೆನ್, ಪೇಪರ್ ತೆಗೆದುಕೊಂಡು ನಾನು ಲೆಕ್ಕಾಚಾರ ಮಾಡಿ, ಸಲಹೆ ಕೊಡುತ್ತಿದ್ದೆ. ನನ್ನ ಸಲಹೆ ಪಡೆದುಕೊಂಡು ಶ್ರೀಮಂತರಾದರೇ ಹೊರತು ಈ ವಿರೋಧಿಗಳು ಬಾಯಿ ಬಡಿದುಕೊಳ್ಳುತ್ತಿರುವ ತರಹ ಅವರದು ಅಕ್ರಮ ಸಂಪಾದನೆಯೇನಲ್ಲ.

ರಾತ್ರಿ ಹೊತ್ತಿಗೆ ಮಗನ ಫೋನ್. ಅವತ್ತಿನ ನನ್ನ ಕಾರ್ಯಕ್ರಮದ ವರದಿಗಳನ್ನೆಲ್ಲ ನೋಡಿ, ನಾನ್‌ಸೆನ್ಸ್ ಅಂಕಲ್. ನೀವು ಹಾಗೆ ಮಾಡಬಾರದಿತ್ತು. ಈ ಸಿಸ್ಟಮ್ಮನ್ನು ಬದಲಾಯಿಸಬೇಕಾಗಿದೆ. ಅದು ಬಿಟ್ಟು ನೀವು ಏನೋ ಮಾಡುತ್ತಿದ್ದೀರಿ. ನಾನ್‌ಸೆನ್ಸ್. ನಾಳೆ ನಾನು ಪ್ರೈಮ್ ಮಿನಿಸ್ಟರ್ ಆಗಬೇಕು. ಸಿಸ್ಟಮ್ ಹಾಳು ಮಾಡಿದ್ರೆ ವಾಟ್ ಕ್ಯಾನ್ ಐ ಡು ಎಂದು ಬಡಬಡಿಸುತ್ತಿದ್ದರು. ನಾನು ಉತ್ತರವನ್ನೇ ಕೊಡುತ್ತಿರಲಿಲ್ಲ.

ನಿಮಗೆಲ್ಲ ಅಚ್ಚರಿಯಾಗಬಹುದು. ಹೆಚ್ಚು ಮಾತನ್ನೇ ಆಡದೆ ನಾನು ಹತ್ತು ವರ್ಷ ಹೇಗೆ ಕಳೆದೆ ಎಂದು. ನಾನು ಮಾತನ್ನೇ ಆಡುತ್ತಿರಲಿಲ್ಲ ಎನ್ನುವುದು ಸತ್ಯವಲ್ಲ. ಆದರೆ, ಬಹಿರಂಗವಾಗಿ ಮಾತನ್ನಾಡುತ್ತಿರಲಿಲ್ಲ ಅಷ್ಟೇ. ಪ್ರತಿನಿತ್ಯ ರಾತ್ರಿ ಮಲಗುವ ಮುನ್ನ ನಮ್ಮ ಮನೆಯ ಹಜಾರದಲ್ಲಿನ ಕನ್ನಡಿಯ ಮುಂದೆ ನಿಂತುಕೊಂಡು ಅರ್ಧಗಂಟೆ ಒಬ್ಬನೇ ಮಾತನಾಡುತ್ತಿದ್ದೆ. ಆ ದಿನದಲ್ಲಿ ನನಗಾದ ಮುಜುಗರ, ನೋವು, ಹಿಂಸೆ ಎಲ್ಲವನ್ನೂ ನನಗೆ ನಾನೇ ಹೇಳಿಕೊಂಡು ಸಮಾಧಾನವಾದ ಮೇಲೆ ಮಲಗುತ್ತಿದ್ದೆ. ಅಷ್ಟೇ ಅಲ್ಲ, ರಾತ್ರಿ ಬೇರೆ ಬೇರೆ ದೇಶಗಳ ಪ್ರಧಾನಿ-ಅಧ್ಯಕ್ಷರ ಜತೆ ಗಂಟೆಗಟ್ಟಲೆ ಅಭಿವೃದ್ಧಿ, ಆರ್ಥಿಕ ಸ್ಥಿತಿ, ವಿದೇಶಿ ವ್ಯವಹಾರ ಹೀಗೆ ಹಲವು ವಿಚಾರಗಳ ಕುರಿತು ಮಾತನಾಡುತ್ತಿದ್ದೆ. ಅಮೆರಿಕ ಸಹಿತ ಎಷ್ಟೋ ದೇಶಗಳ ಅಧ್ಯಕ್ಷರು ಯಾವುದೇ ಆರ್ಥಿಕ ಸಮಸ್ಯೆ ಬಂದಾಗ ನನ್ನ ಸಲಹೆ ಕೋರುತ್ತಿದ್ದರು. ನಾನು ಮಾತನ್ನೇ ಆಡುವುದಿಲ್ಲ ಎಂದು ನಿಮಗೆ ಯಾರು ಹೇಳಿದರು? ಒಂದು ಕಡೆ, ಈ ದೇಶದ ಪ್ರಧಾನಿಯಾಗಿ ಕೆಲಸ ಮಾಡುತ್ತಿರುವ ಹಾಗೆಯೇ ಇನ್ನೊಂದೆಡೆ ಹತ್ತು ಹಲವು ರಾಷ್ಟ್ರಗಳ ಆರ್ಥಿಕ ಮಾರ್ಗದರ್ಶಕನಾಗಿಯೂ ಕೆಲಸ ಮಾಡಿದ್ದೆ. ಅದೆಲ್ಲ ನಿಮಗೆಲ್ಲಿ ತಿಳಿಯಬೇಕು, ಪಾಪ.

ನನ್ನನ್ನು ಒಬ್ಬ ದುರ್ಬಲ ಪ್ರಧಾನಿ ಎಂದು ಮಾಧ್ಯಮದವರು, ವಿರೋಧಿಗಳು ಹಂಗಿಸುತ್ತಲೇ ಇದ್ದಾರೆ. ನನ್ನ ಈ ಕೆಲವು ಪ್ರಶ್ನೆ ನೀವು ಉತ್ತರ ಕೊಟ್ಟು, ನಾನು ದುರ್ಬಲನೋ,

ಪ್ರಬಲನೋ ಎಂದು ನಿರ್ಧರಿಸಿ. ಒಬ್ಬ ದುರ್ಬಲನಾಗಿದ್ದರೆ ಹತ್ತು ವರ್ಷಗಳ ಕಾಲ ಈ ದೇಶವನ್ನು ಆಳಲು ಸಾಧ್ಯವಿತ್ತೇ? ಒಬ್ಬ ದುರ್ಬಲನಾಗಿದ್ದರೆ, ಈ ಪಕ್ಕಾ ರಾಜಕಾರಣಿಗಳ ಮಧ್ಯೆ ಏಗಿಕೊಂಡು ಆಡಳಿತ ನಡೆಸಲು ಸಾಧ್ಯವಿತ್ತೇ? ದುರ್ಬಲನಾಗಿದ್ದರೆ, ಕಾಂಗ್ರೆಸ್‌ನವರ ಒಳ ಕಿರುಕುಳ, ಬಿಜೆಪಿಯವರ ಹೊರ ಕಿರುಕುಳಗಳನ್ನು ಸಹಿಸಲು ಸಾಧ್ಯವೇ? ಭ್ರಷ್ಟಾಚಾರವನ್ನು ಹತ್ತಿಕ್ಕಲು ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೆ ತರಲು ಸಾಧ್ಯವಿತ್ತೇ? ಆ ಕಾಯ್ದೆಯನ್ನು ಬಳಸಿಕೊಂಡು ತಾನೇ ನೀವೆಲ್ಲ ನನ್ನ ಜತೆಗಾರ ಸಚಿವರ ಭ್ರಷ್ಟಾಚಾರವನ್ನು ಬಯಲಿಗೆಳೆದಿದ್ದು – ಒಬ್ಬ ಗಟ್ಟಿ ಇಲ್ಲದ ಮನುಷ್ಯನಿಂದ ಇಂಥ ಕ್ರಮ ಸಾಧ್ಯವೇ? 2ಜಿ ಹಗರಣ. ಕೋಲ್ ಹಗರಣಗಳಲ್ಲೆಲ್ಲ ನನ್ನ ಮುಖಕ್ಕೆ ಮಸಿ ಬಳಿದ ಸಂದರ್ಭದಲ್ಲೂ ಅಷ್ಟೇ ಘನ ಗಾಂಭೀರ್ಯದಿಂದ ನಾನು ಇರಲು ಸಾಧ್ಯವಾಗಿದ್ದು ನನ್ನೊಳಗಿನ ಶಕ್ತಿಯಿಂದ ತಾನೇ? ದುರ್ಬಲನಾಗಿದ್ದರೆ, ಎರಡನೇ ಬಾರಿ ನನ್ನ ಸಾಧನೆಯಿಂದ ಆಡಳಿತಕ್ಕೆ ಬರಲು ಆಗುತ್ತಿತ್ತೇ? ಎಲ್ಲರೂ ರಾಜೀನಾಮೆ ಕೊಟ್ಟ ಸಂದರ್ಭದಲ್ಲಿ ಹಠ ಹಿಡಿದು ಅಣ್ವಸ್ತ್ರ ಒಪ್ಪಂದ ಜಾರಿಗೆ ತಂದವನು ನಾನೇ ತಾನೇ? ಭೂ ಸುಧಾರಣಾ ಕಾಯ್ದೆ, ಮನರೇಗಾ, ಆಹಾರ ಭದ್ರತಾ ಕಾಯ್ದೆ ಜಾರಿಗೆ ಬಂದದ್ದು ನನ್ನ ಅವಧಿಯಲ್ಲಿ ತಾನೇ? ಎಷ್ಟೋ ಮಂತ್ರಿಗಳು ನನ್ನ ಮಾತನ್ನೇ ಕೇಳದೇ ಇದ್ದಾಗಲೂ ಬಹಿರಂಗವಾಗಿ ಎಲ್ಲೂ ಆಡಿಕೊಳ್ಳದೆ ಒಳಗೇ ಎಲ್ಲವನ್ನೂ ಅರಗಿಸಿಕೊಂಡು ಆಡಳಿತ ನಡೆಸಲು ಒಬ್ಬ ದುರ್ಬಲನಿಂದ ಸಾಧ್ಯವೇ? ಪಾರ್ಲಿಮೆಂಟಿನಲ್ಲಿ ಬಿಜೆಪಿ ಮತ್ತು ವಿರೋಧ ಪಕ್ಷದವರು ನನಗೆ ಮಾತನಾಡಲು ಕೂಡ ಅವಕಾಶ ಕೊಡದಿದ್ದಾಗ ಒಂದಿಷ್ಟೂ ಅಲುಗಾಡದೇ, ಧೃತಿಗೆಡದೆ ಇದ್ದದ್ದು ಯಾರು, ನಾನು ತಾನೇ?

ಈಗ ಹೇಳಿ, ನಾನು ದುರ್ಬಲನೇ?

ಇನ್ನಷ್ಟು ವಿಚಾರಗಳನ್ನು ಹಂಚಿಕೊಳ್ಳಬೇಕಾಗಿದೆ. ನಿವೃತ್ತಿ ಜೀವನದಲ್ಲಿ ಮತ್ತಷ್ಟು ಪತ್ರಗಳನ್ನು ಬರೆಯುವೆ.

ತಮ್ಮ ವಿಶ್ವಾಸಿ

ಮನಮೋಹನ ಸಿಂಗ್,

ಮಾಜಿ ಪ್ರಧಾನಿ, ಭಾರತ

●

## ಹೊಡೆತ

ಕಲ್ಲು ಹೊಡೆದರೆ
ಹಣ್ಣು ಬೀಳುತ್ತೆ
ಕಣ್ಣು ಹೊಡೆದರೆ
ಹಲ್ಲು ಬೀಳುತ್ತೆ

*– ಸುಕೇಶವ*

# ತೂಕದ ವ್ಯಾಖ್ಯಾನ

- ಆರತಿ ಘಟಿಕರ್, ದುಬೈ

ನನ್ನ ಹಮ್ಮು ಬಿಮ್ಮುಗಳನ್ನಾದರೂ ಬಿಡುವೆ. ಆದರೆ ಬಿಡಲಾಗದು ನನ್ನ ಜಿಮ್ಮು ಎನ್ನುವ ಪರಿಸ್ಥಿತಿ ನನ್ನದು. ಕಾರಣ ನನಗೂ ಜಿಮ್ಮಿಗೂ ಒಂದು ಅವಿನಾಭಾವ ಸಂಬಂಧ ಬೆಸೆದುಕೊಂಡುಬಿಟ್ಟಿದೆ. ಈ ನಂಟಿಗೆ ಮೂಲ ಕಾರಣವೇ ವರ್ಷವರ್ಷವೂ ಕರೆಯದೆ ವಕ್ಕರಿಸುವ ಬೇಡದ ಅತಿಥಿಯಂತೆ ಏರುವ ಈ ನನ್ನ ಹಾಳು ತೂಕ! ಮೇಲೆ ಹೋಗಿದ್ದು ಕೆಳಗಿಳಿಯಲೇಬೇಕು ಎನ್ನುವ ತತ್ವಕ್ಕೆ ಅಪವಾದ ನನ್ನ ತೂಕವೇ ಎಂದರೆ ತಪ್ಪಾಗಲಾರದು! ಇದನ್ನು ಆಗಾಗ ಗಮನಿಸಿಕೊಂಡು, ಬೆಚ್ಚಿಬಿದ್ದು ಜಿಮ್ಮಿನತ್ತ ಧಾವಿಸದಿದ್ದರೆ ತನ್ನ ಪಾಡಿಗೆ ತಾನು ಏರುವ ಹಾದಿ ಹಿಡಿದುಕೊಂಡು ಬಿಡುತ್ತದೆ.

ಹಾಗಾಗಿಯೇ ನನ್ನ ಮತ್ತು ಜಿಮ್ಮಿನ ನಂಟು ಶುರುವಾಗಿದ್ದು. ನಾವಿರುವ ಕಟ್ಟಡದಲ್ಲಿ ಅಗತ್ಯವಾದ ಎಲ್ಲ ಉಪಕರಣಗಳಿರುವ ವ್ಯವಸ್ಥಿತ ಜಿಮ್ಮು ಇದ್ದ ಕಾರಣ ನನಗೆ ಸರಿ ಹೊಂದುವ ವೇಳೆಗೆ ಅಲ್ಲಿ ಹೋಗಿ ವ್ಯಾಯಾಮ ಮಾಡಿಕೊಂಡು ಬರಲು ಅನುಕೂಲವಾಗಿದೆ. ಅಂತೂ ದಿನಕ್ಕೊಮ್ಮೆ ನಾನು ಜಿಮ್ಮಿನ ಕಡೆ ಹೋಗದಿದ್ದರೆ ಏನೋ ಬೇಜಾರು. ಏನೂ ಕಳೆದುಕೊಂಡೆ ಇಲ್ಲದಂತೆ! ನಾನು ಹೇಳ್ತಾ ಇರೋದು ಅದೇರಿ ನನ್ನ ಕ್ಯಾಲೋರಿ! ಇನ್ನು ಅಲ್ಲಿ ನನ್ನ ಹಾಗೆ ಕೊಂಚ ಗುಂಡು ಗುಂಡಾಗಿರುವ ಮಹಿಳಾ ಮಣಿಗಳನ್ನು ಕಂಡಾಗ ಇವರಲ್ಲಿ ಕೆಲವರು ನನಗೆ ಸಮಾನ ವಯಸ್ಕರು, ಸಮಾನ ಮನಸ್ಕರು ಇಲ್ಲದಿದ್ದರೂ ಸಮಾನ ತೂಕಸ್ಥರು ಇರುವುದೇ ನನಗೆ ಎಲ್ಲಿಲ್ಲದ ಸಮಾಧಾನ! ಆದರೆ ಕೊಂಚ ತೆಳ್ಳಗಿರುವವರೂ ಕೂಡ ಜೋರಾಗಿ ಎಕ್ಸರ್‌ಸೈಜ್ ಮಾಡುವುದನ್ನು ಕಂಡು ನಾನು ''ಅಯ್ಯೋ ನಿಮಗ್ಯಾಕೆ ಬಿಡಿ ಈ ಪಾಟಿ ಎಕ್ಸರ್‌ಸೈಜು, ವ್ಯಾಯಾಮ ಎಲ್ಲಾ'' ಎಂದು ಹೊಟ್ಟೆ ಉರಿದುಕೊಂಡು ಪ್ರಶ್ನಿಸಿದಾಗ ನನಗಿಂಥಾ ಜೋರಾಗಿ ಸೈಕಲ್ ಹೊಡೆಯುವ ರೀನಾ ''ಅಯ್ಯೋ ಹಾಗೇನಿಲ್ಲ ಬಿಡಿ, ನಮ್ಮ ವೆಯಿಟ್ ಸರಿಯಾಗಿ ಮೇನ್ಟೈನ್ ಮಾಡಬೇಕಲ್ಲ, ಇಲ್ಲದಿದ್ದರೆ ಏರಿಕೊಂಡು ಹೋಗುತ್ತಪ್ಪ. ಆಮೇಲೇ ಇಳಿಸೋದು ಎಷ್ಟು ಕಷ್ಟ ಅಲ್ವಾ'' ಎಂದು ಉಲಿದಿದ್ದಳು (ನಿಮ್ಮ ಹಾಗೆ ಅನ್ನದಿದ್ದರೂ ನಾನೇ ಅರ್ಥೈಸಿಕೊಂಡೆ, ಜಾಣೆ ನಾನು).

ಆಗ ನಾನು ''ರೀನಾ ನೀವು ಬಿಡಿ ನಾನು ಕೂಡ ಮೇನ್ಟೈನ್ ಮಾಡ್ತಾ ಇದ್ದೀನಲ್ರಿ! ಅವಳು ಕೊಂಚ ಶಾಕ್ ಆಗುವ ಮುನ್ನವೇ ಹೇಳಿಬಿಟ್ಟೆ ''ಅದೇ ನನ್ನ ಓವರ್ ವೈಟ್ನ ಕಣ್ರೀ'' ಅಂದೆ ನಗುತ್ತಾ. ಅವಳೂ ಮರುಕದಿಂದ ನನ್ನತ್ತ ನೋಡಿ ''ಅಯ್ಯೋ ಹಾಗೇನಿಲ್ಲ ಬಿಡಿ! ದಿನಾಗಲೂ ಬಿಡದೆ ಮಾಡಿ ಖಂಡಿತ ತೂಕ ಇಳಿಸ್ಕೋತೀರಾ'' ಎಂದು ಸ್ಫೂರ್ತಿ ತುಂಬಿದಳು.

ಅವಳ ಮಾತಿನಿಂದ ನನ್ನಲ್ಲಿ ಜೋಶ್ ಹಾಗೂ ಹುಮ್ಮಸ್ಸಿನ ಸಂಚಲನವೇ ಹರಿದು ಅವಳ ಹಾಗೆ ತೆಳ್ಳಗೆ ಆಗುವ ಕನಸಿಗೆ ಚಾಲನೆ ಕೊಡುತ್ತಾ ನಾನೂ ಎಲ್ಲಿಂದ ಶುರುವಿಟ್ಟುಕೊಳ್ಳಲ್ಲಪ್ಪ ಎಂದು ಸುತ್ತಲೂ ಕಣ್ಣು ಹಾಯಿಸಿದಾಗ ''ಗುಂಡಮ್ಮ ಇಲ್ಲಿ ಬಾ'' ಎಂದು ಎಲ್ಲ ಮಶೀನ್ಗಳೂ ನನ್ನನ್ನೇ ಕೈ ಬೀಸಿ ಕರೆಯುವಂತೆ ಭಾಸವಾಯಿತು! ಇನ್ನು ನಮ್ಮಂಥ ದಢೂತಿಗಳ ಭಾರ

ದಿನವೂ ಹೊತ್ತು, ನಿರ್ಲಿಪ್ತವಾಗಿ ನಿಂತ ಹಲವಾರು ಕೊಬ್ಬು ಕರಗಿಸುವ ಯಂತ್ರಗಳಲ್ಲಿ ನನಗೆ ಒಗ್ಗುವ ಕ್ರಿಯೆಯನ್ನು ಆರಿಸಿಕೊಂಡೆ. ಆಗ ನನ್ನ ಅಂಗಾಂಗಗಳು ಮೊದಮೊದಲು ಕಿರುಗುಟ್ಟಿ ''ಅಯ್ಯೋ ಮಹರಾಯ್ತಿ ನಮಗ್ಯಾಕೆ ಇಷ್ಟೊಂದು ಕಷ್ಟ ಕೊಡ್ತೀಯಾ ಕಣೆ'' ಅಂತ ಕೊಂಚ ಹೊತ್ತು ಮುನಿದು ಕುಳಿತರೂ ಕ್ರಮೇಣ ನನ್ನ ದಾರಿಗೆ ಬಂದವು.

ಹಾಗೆಯೇ ಜಿಮ್ಮಿನ ಸುತ್ತಲೂ ಕಣ್ಣು ಹಾಯಿಸಿದಾಗ ಜಿಮ್ಮಿನ ಗೋಡೆಯ ಉದ್ದಗಲಕ್ಕೂ ನಮಗೆ ಶಾಕ್ ಹೊಡೆಸುವ, ನಮ್ಮ ಗಾತ್ರವನ್ನು ಅಗಾಧವಾಗಿ ತೋರಿಸುವ ಬೃಹದಾಕಾರದ ಕನ್ನಡಿಗಳು! ಕನ್ನಡಿ ಪ್ರಿಯಳಾದ ನನಗೆ ಇಲ್ಲೂ ಆಗಾಗ ಕಸರತ್ತು ಮಾಡುತ್ತಾ ನನ್ನನ್ನೇ ನೋಡಿಕೊಳ್ಳುವ ರೂಢಿ. (ಕಸರತ್ತು ಮಾಡುತ್ತಾ ಮಾಡುತ್ತಾ ಎಳೆ ಸೂರ್ಯನ ಕಿರಣಗಳ ಸ್ಪರ್ಶಕ್ಕೆ ಕರಗುವ ಇಬ್ಬನಿಯಂತೆ ನನ್ನ ಕೊಬ್ಬು ಕೂಡ ಹಾಗೇ ಕರಗಿ ಹೋಗುವುದೇನೋ ಅನ್ನುವ ಹುಚ್ಚು ಕಲ್ಪನೆ ಇರಬಹುದು!) ಇರಲಿ, ಈ ಕನ್ನಡಿಯಲ್ಲಿ ಯಾವ ಕೋನದಿಂದ ನೋಡಿದರೂ ಅದೇ ಗಾತ್ರ! ಯಾಕೋ ನಮ್ಮನೆ ಕನ್ನಡಿಗಿಂತಾ ಇದ್ರಲ್ಲಿ ದಪ್ಪ ಕಾಣಸ್ತೀನಪ್ಪಾ! ಸರಿಯಿಲ್ಲ ಇವು ಅಂದುಕೊಂಡು ಕನ್ನಡಿಯನ್ನೇ ಅನುಮಾನಿಸಿದಾಗ ಮನಸ್ಸು ನಿರಾಳವಾಯಿತು!

ಅಂತೂ ಇಂತೂ ನಾನು ಕೂತಲ್ಲೇ ಸೈಕಲ್ ಹೊಡೆದು, ಅಲ್ಲೇ ಗೂಟಾ ಹೊಡೆದು ನಿಂತಿರುವ ಟ್ರೆಡ್ ಮಿಲ್ ಮೇಲೆ ಮೈಲಿಗಟ್ಟಲೆ ನಡೆದು, ನಡು ಕರಗಿಸುವ ಯಂತ್ರದ ಮೇಲೆ ಕುಳಿತು ಗಿರ್ರೆಂದು ತಿರುಗಿ, ಕೊಸರಿಗೆ ಕೆಲವು ಸಣ್ಣ ಪುಟ್ಟ ವ್ಯಾಯಾಮಗಳನ್ನು ಮಾಡಿ, ಉಸ್ಸಪ್ಪ ಅನ್ನುತ್ತ ಈ ಕೊಬ್ಬು ಕರಗಿಸುವ ಯಜ್ಞಕ್ಕೆ ಸ್ವಾಹಾ ಎಂದೆ. (ಹೀಗಾಗಿ ಇಷ್ಟೆಲ್ಲಾ ಕಷ್ಟ ಪಟ್ಟ ಮೇಲೆ ಮನೆಗೆ ತೆರಳಿದ ನಂತರ ಜಿಡ್ಡಿನ ಪದಾರ್ಥ, ಕುರುಕಲು ತಿಂಡಿಗಳನ್ನು ಸುಖಾ ಸುಮ್ಮನೆ ಸ್ವಾಹಾ ಮಾಡಲು ಭಯ ಕಣ್ರೀ! ಹಾಗಾಗಿ ವಾರದ ಐದಾರು ದಿನಗಳಾದರೂ ನನ್ನ ಜಿವ್ಹಾ ಚಾಪಲ್ಯಕ್ಕೆ ದಿಗ್ಬಂದನ ಹಾಕಿ ತೆಪ್ಪಗಿರುತ್ತೇನೆ).

ಮೊದ ಮೊದಲು ಟಿವಿಯಲ್ಲಿ ನೋಡಿಕೊಂಡ ಕೆಲವು ಕಡಿಮೆ ತೂಕದ ಡಂಬೆಲ್‌ಗಳನ್ನು ಹಿಡಿದು ಎಕ್ಸರ್‌ಸೈಜ್ ಮಾಡುತ್ತಿದ್ದೆ. ಆದರೆ ಇತ್ತೀಚಿಗೆ ನನಗೆ ವಿಪರೀತ ಮೊಣಕೈ ನೋವು ಶುರುವಾಗಿ ವೈದ್ಯರ ಬಳಿ ಹೋದಾಗ ನನಗಾಗಿರುವುದು ''ಟೆನಿಸ್ ಎಲ್ಬೊ'' ಎಂದು ಘೋಷಿಸಿದರು. ನನಗಾಗ ಆಶ್ಚರ್ಯ! ಇದೇನು ನನ್ನ ಜೀವಮಾನದಲ್ಲಿ ಒಮ್ಮೆಯೂ ಟೆನ್ನಿಸ್ ಆಟ ಆಡಿದವಳಲ್ಲ, ಆದರೆ ಟೀವಿಯಲ್ಲಿ ಬರುವ ವಿಮ್ಬಲ್ಡನ್, ಫ್ರೆಂಚ್ ಓಪನ್ ಟೂರ್ನಮೆಂಟ್‌ಗಳನ್ನು ತಪ್ಪದೆ ನೋಡಿದ್ದುಂಟು! ವೈದ್ಯರ ಮಾತು ಆಲಿಸಿದ ನನ್ನ ಪತಿ ''ನೋಡು ಅದಕ್ಕೆ ನಾನು ಹೇಳಿದ್ದು ತುಂಬಾ ಟೆನಿಸ್ ನೋಡಬೇಡ ಅಂತ'' ಎಂದು ತಮಾಷೆ ಮಾಡಿದರು! ಸುಮ್ಮನಿರದ ನಾನು ''ಆಹಾ ಹಾಗಾದ್ರೆ ನೀವು 24 ಗಂಟೆ (ಸಿಕ್ಕರೆ) ಕ್ರಿಕೆಟ್ ನೋಡ್ತಾ ಇರ್ತೀರಲ್ಲ, ನಿಮಗೆ ಇನ್ನೂ ಹೇಗೆ ಕ್ರಿಕೆಟ್ ಪೇನ್ ಬಂದಿಲ್ಲ ಅನ್ನೋದೇ ನನಗೆ ಆಶ್ಚರ್ಯ ಕಣ್ರೀ'' ತಿರುಗೇಟು ಕೊಡುತ್ತಾ ನನ್ನ ಕ್ರಿಕೆಟ್ ಕ್ರೇಜಿ ಪತಿಯನ್ನು ಕೊಂಡಾಡಿದೆ!

ಸದ್ಯಕ್ಕೆ ನಮ್ಮ ಸರಸ ಸಂಭಾಷಣೆಗೆ ವಿರಾಮ ಹಾಡಿ ಮೆಡಿಕಲ್ ಶಾಪಿನಲ್ಲಿ ಮೊಣಕೈಗೆ ಕೊಂಡ ಬೆಲ್ಟ್ ಹಾಕಿಕೊಂಡು ಬರುತ್ತಿದ್ದಾಗ ಅಕಸ್ಮಾತಾಗಿ ನನ್ನ ಆತ್ಮೀಯ ಗೆಳತಿಯನ್ನು ಕಂಡು

ನನಗೆ ಭಾರಿ ಖುಷಿ. ಅವಳ ಮುಂದೆ ನನ್ನ ವೃತ್ತಾಂತವನ್ನೆಲ್ಲಾ ಹೇಳಿ ನೋವು ತೋಡಿಕೊಂಡಾಗ ಅವಳು ''ಅಯ್ಯೋ ಟೆನಿಸ್ ಎಲ್ಬೋ ಅಂದ್ರಾ! ಹಾಗಾದ್ರೆ ಒಂದ್ ಕೆಲಸ ಮಾಡು ಇನ್ನು ನೀನು ನಿಜವಾಗಲು ಟೆನಿಸ್ ಆಡಕ್ಕೇ ಶುರು ಮಾಡು, ಆಗ ನಿನ್ನ ಟೆನಿಸ್ ಎಲ್ಬೋ ನೋವು ವಾಸಿ ಆಗಬಹುದು'' ಎಂದು ತುಂಟ ಸಲಹೆ ನೀಡಿದ್ದಳು! ಆಗ ನಿಜಕ್ಕೂ ನನ್ನ ಸಪ್ಪೆ ಮೋರೆಯಲ್ಲಿ ಕೊಂಚಕಾಲ ನೋವು ಮರೆಯಾಗಿ ನಾನು 'ಆಹಾ! ಏನು ಸೂಪರ್ ಸುಪ್ರೀಂ ಐಡಿಯ ಕಣೆ, ಖಂಡಿತ ಶುರು ಮಾಡ್ತೀನಿ' ಎಂದು ಅರೆ ಕ್ಷಣದಲ್ಲೇ ನನ್ನಂಥಾ ಹೆವಿ ವೈಟು ಗಾತ್ರದವಳನ್ನು ಬಳುಕುವ ಸಾನಿಯ ಮಿರ್ಜಾಳ ಗೆಟಪ್‌ನಲ್ಲಿ ಟೆನಿಸ್ ಆಟಗಾರ್ತಿಯಂತೆ ಊಹಿಸಿಕೊಂಡಾಗ ನಗು ತಡೆಯಲಾಗಲಿಲ್ಲ!

ದಿನದಿನಕ್ಕೂ ನನ್ನ ಜಿಮ್ಮಿನ ಒಡನಾಟ ಹೆಚ್ಚುತ್ತಿದೆ ಎನ್ನಬಲ್ಲೆ. ಮೊದಲಿನ ಹಾಗೆ ಜಿಮ್ ಈಗ ಬೋರ್ ಹೊಡೆಸುತ್ತಿಲ್ಲ. ಕಾರಣ ಅಲ್ಲಿ ನಮ್ಮದೊಂದು ನಿತ್ಯವೂ ಸೇರುವ ಗೆಳತಿಯರ ಗುಂಪೊಂದು ಅರಳಿ ನಿಂತಿದೆ. ಹಾಗಾಗಿ, ಮೊದ ಮೊದಲು ಮುಕ್ಕಾಲು ಗಂಟೆಗಷ್ಟೇ ಸೀಮಿತವಾಗಿದ್ದ ನನ್ನ ಜಿಮ್ಮಿನ ಸಮಯ ಈಗ ಎರಡು ಗಂಟೆಯವರೆಗೂ ವಿಸ್ತಾರಗೊಂಡಿದೆ. ಹಾಗಂತ ನಾನು ಎರಡು ತಾಸು ವ್ಯಾಯಾಮ ಮಾಡುತ್ತೀನಿ ಅಂತಲ್ಲ. ಆದರೆ ಹರಟೆಗೂ ಕೊಂಚ ಸಮಯ ಬೇಕಲ್ಲ! ಈ ಕಾಡು ಹರಟೆಯೇ ನನ್ನನ್ನು ಜಿಮ್ ಕಡೆಗೆ ಹೋಗಲು ಪ್ರೇರೇಪಿಸುವುದು ಅಂದರೆ ತಪ್ಪಾಗಲಾರದು.

ನಮ್ಮದು *talk while u walk* ಅನ್ನುವ ಪಾಲಿಸಿ. ಹಾಗಾಗಿ ನಮ್ಮ ಮಾತುಕತೆ, ಹರಟೆಗಳು ಪ್ರಚಲಿತ ವಿದ್ಯಮಾನಗಳ ಸುತ್ತ ಒಮ್ಮೆ ಗಿರಕಿ ಹೊಡೆಯುತ್ತಾ, ಮಕ್ಕಳ ಓದಿನ ರಗಳೆಗಳಿಗೂ ಚಾಚಿಕೊಂಡು, ಮಧ್ಯದಲ್ಲಿ ನಮಗೆ ಗೊತ್ತಿರುವ ಲೋ ಕ್ಯಾಲೋರಿ ಅಡುಗೆಗಳನ್ನೂ ವಿನಿಮಯ ಮಾಡಿಕೊಳ್ಳುತ್ತಾ ಪುಲಕಿತರಾಗುವ ಹೊತ್ತಿಗೆ ನಮ್ಮ ಗುಂಪಿನಲ್ಲಿ ಒಬ್ಬ ಗೆಳತಿ ಅಕಸ್ಮಾತಾಗಿ ತಾನು ವಾರಾಂತ್ಯದಲ್ಲಿ ಭೇಟಿ ಕೊಟ್ಟ ಯಾವುದಾದರೂ ಹೊಸ ರೆಸ್ಟೋರೆಂಟ್/ಹೋಟೆಲಿನ ಬಗ್ಗೆ ಹೇಳಿದರಂತೂ, ನಮ್ಮ ಆಸಕ್ತಿಗಳು ದಿಢೀರನೆ ಲೋ ಕ್ಯಾಲೋರಿ ಅಡುಗೆಗೆ 'ಹೋಗೋಲೋ' ಎನ್ನುತ್ತಾ ಅಲ್ಲಿಂದ ಯು ಟರ್ನ್ ಹೊಡೆದು ಅವಳನ್ನು ಕುರಿತು ''ಪ್ರೀತಿ ಈ ಹೊಸ ರೆಸ್ಟೋರೆಂಟ್ ಎಲ್ಲಿ ಬರುತ್ತೆ ರೀ'' ಅಂತ ಕೇಳಿಕೊಂಡು ಅದರ ಬಗ್ಗೆ ಹೊಸ ಚರ್ಚೆ ಶುರುವಿಟ್ಟುಕೊಂಡ ಕ್ಷಣಗಳೂ ಬಹಳಷ್ಟಿವೆ ಬಿಡಿ! ಹೀಗೆ ಜಿಮ್ಮಿನಲ್ಲೂ ಆಗಾಗ ಇಣುಕಿ ನೋಡುವ ಅಡುಗೆ, ಊಟದ ವಿಷಯಗಳೇ ನಮ್ಮ ಕಸರತ್ತುಗಳಿಗೆ ತಾಕತ್ತು! ಹಾಗೆಯೇ ಇನ್ನೊಂದು ವಿಚಾರ ಇಲ್ಲಿ ಪ್ರಸ್ತಾಪ ಮಾಡುವುದಾದರೆ ನನ್ನ ತೂಕ ಏರುವುದಕ್ಕೆ, ಪರೋಕ್ಷ ಕಾರಣ ಇಲ್ಲಿ ನಾವು ಅನುಭವಿಸುತ್ತಿರುವ ಉತ್ತಮ ದರ್ಜೆ ಮೂಲಭೂತ ಸೌಕರ್ಯಗಳ ಜೊತೆ ನನ್ನಂಥಹ ಸೋಮಾರಿಗಳಿಗೆ ಈ ಊರಿನಲ್ಲಿ ಒದಗಿ ಬಂದಿರುವ ಒಂದು ಅದ್ಭುತ ಸವಲತ್ತು ಎಂಬುದೇ ನನ್ನ ಬಲವಾದ ಅನಿಸಿಕೆ. ಅದೇನಪ್ಪಾ ಅಂದ್ರೆ ದುಬೈನಲ್ಲಿ ಎಲ್ಲ ಅಗತ್ಯದ ಸಾಮಾನುಗಳನ್ನು ಈ ಸೂಪರ್ ಮಾರ್ಕೆಟ್ಗಳು ಹಾಗೂ ಇತರ ವಾಣಿಜ್ಯ ಮುಂಗಟ್ಟುಗಳು ನಮ್ಮ ಮನೆ ಬಾಗಿಲಿಗೇ ತಲುಪಿಸುವ ಹೋಂ ಡೆಲಿವರಿ ಎಂಬ ಅದ್ಭುತ ವ್ಯವಸ್ಥೆ. ಒಂದು ಫೋನ್ ಮಾಡಿದರೆ ಸಾಕು ದಿನಸಿ/ತರಕಾರಿಯಿಂದ ಹಿಡಿದು ಹೋಟೆಲಿನ ಇಡ್ಲಿ, ದೋಸೆ, ಐರನ್ ಬಟ್ಟೆಯವರೆಗೆ ಎಲ್ಲವೂ ಇಲ್ಲಿ ಹೋಮ್ ಡೆಲಿವರಿ.

ಹೀಗಾಗಿ ಸಣ್ಣ ಪುಟ್ಟ ಸಾಮಾನಿಗೆ ನಾವೇ ಓಡಾಡಬೇಕೆಂಬುದಿಲ್ಲ ಕಿರಿ ಕಿರಿ! ಈ ಸೌಲಭ್ಯ ನನ್ನ ಹೆಚ್ಚಿನ ಓಡಾಟವನ್ನು ಮೊಟಕುಗೊಳಿಸಿ ಆಕಳಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ. (ನನ್ನ ಅಮ್ಮ ಇಲ್ಲಿಗೆ ಬಂದಾಗ ಈ ಸೌಕರ್ಯವನ್ನು ಬಾಯಿ ತುಂಬಾ ಕೊಂಡಾಡುತ್ತಾ 'ಏನೇ ನಿನ್ನ ಅದೃಷ್ಟ, ಒಲೆ ಮೇಲೆ ಎಣ್ಣೆ ಇಟ್ಟು ಸಾಸಿವೆ ಮುಗಿದಿದ್ರೆ ಕೂಡ ಆರಾಮಾಗಿ ತರೆಸಿ ಕೊಳ್ಳಬಹುದಪ್ಪ' ಅನ್ನುತ್ತಾ ನಗಾಡುತ್ತಿದ್ದರು). ಹೀಗಾಗಿ ಇಷ್ಟೆಲ್ಲಾ ಸವಲತ್ತು ಒದಗಿ ಬಂದಾಗ ದಿನ ನಿತ್ಯದ ಹಾಲು ತರಕಾರಿ ಮುಂತಾದವುಗಳ ಖರೀದಿಗೆ ಕಡ್ಡಾಯವಾಗಿ ಅಂಗಡಿ ಮಾರುಕಟ್ಟೆಗಳ ಕಡೆಗೆ ಹೋಗಲೇಬೇಕಾದ ನನ್ನ ಸ್ವಲ್ಪವಾದರೂ ಶ್ರಮದ ತಿರುಗಾಟವನ್ನು ಉಳಿಸಿಕೊಂಡು ಅದರ ಜೊತೆಗೆ ನನ್ನ ಹೆಚ್ಚಿನ ತೂಕವನ್ನೂ ನನ್ನಲ್ಲೇ ಭದ್ರವಾಗಿ ಉಳಿಸಿಕೊಂಡಿರುವನೇನೋ ಅನ್ನುವುದು ನನ್ನ ಅನಿಸಿಕೆ. (ಹಾಗೆ ತಾವೇ ಹೋಗಿ ಶಾಪಿಂಗ್ ಮಾಡಬೇಕೆನ್ನುವ ಉತ್ಸಾಹಿ ಮಂದಿ ಅಗತ್ಯವಾಗಿ ಮಾಡಬಹುದು, ಆದರೆ ಉತ್ಸಾಹಿತರಲ್ಲಿ ನನ್ನನ್ನು ನಾನು ಹಿಡಿದುಕೊಂಡಿಲ್ಲ ಅಷ್ಟೇ!)

''ನಿನ್ನ ನೋಡಿದರೆ ತೂಕದ ವಿಷಯದಲ್ಲಿ ನನ್ನೂ ಮೀರಿಸ್ತೀಯ ಕಣೆ'' ಎಂದು ಆಗಾಗ ನನ್ನ ಪತಿಯ ಎಚ್ಚರಿಕೆಯನ್ನು ಗಮನಕ್ಕೆ ತೆಗೆದುಕೊಳ್ಳದ ಪರಿಣಾಮ ಇದಾಗಿದ್ದರೂ ನನ್ನ ಮನಸೊಪ್ಪದೆ ನನ್ನ ಕಪೋಕಲ್ಪಿತ ಉತ್ತರ ಬಾಣಗಳನ್ನು ಅವರತ್ತ ಬಿಡುತ್ತಾ ''ರೀ ನಾವುಗಳು ಇಲ್ಲಿ ಸದಾ ಕಾಲ ಮಿನರಲ್ ನೀರು ಕುಡಿಯುತ್ತಾ ವರ್ಷಕ್ಕೆ ಆರೇಳು ತಿಂಗಳಾದರೂ (ಸೆಕೆಗಾಲದಲ್ಲಿ) ಹವಾ ನಿಯಂತ್ರಿತ ವಾತಾವರಣದಲ್ಲಿ ಇರ್ತೀವಲ್ಲ, ತೂಕ ಇದರಿಂದಲೂ ಬೇಗ ಏರುವುದು ಕಣ್ರೀ'' ಎಂದು ಅವರನ್ನು ಒಮ್ಮೆ ನಂಬಿಸುವುದರಲ್ಲೂ ಯಶಸ್ವಿ ಆಗಿದ್ದೆ! ಆದರೆ ಇವೆಲ್ಲಾ ನನ್ನ ತೂಕದ ಸಮಸ್ಯೆಗೆ ನಾನೇ ಕಂಡುಕೊಂಡು ಪಲಾಯನ ವಾದದ ಮಂತ್ರದ ಬಳಕೆ ಅಷ್ಟೇ!

ಏನೇ ಇರಲಿ ಇದೆ ಕಾರಣಕ್ಕಾಗಿ ವರ್ಷವೆಲ್ಲಾ ಜಿಮ್ಮಿನಲ್ಲಿ ಕಷ್ಟಪಟ್ಟು ಬೆವರು ಸುರಿಸಿ ಕೊಂಚ ತೆಳ್ಳಗಾಗುವಷ್ಟರಲ್ಲಿ ನಮ್ಮ ವಾರ್ಷಿಕ ರಜೆ ಬಂದು ಬಿಡುತ್ತದೆ. ಆಗ ಸ್ಕೂಲು ಕಾಲೇಜುಗಳಿಗೆ ಬೇಸಿಗೆ ರಜೆಯಿದ್ದ ಕಾರಣ ಸಾಮಾನ್ಯವಾಗಿ ಎಲ್ಲರೂ ತಮ್ಮ ತಮ್ಮ ತಾಯಿನಾಡಿಗೆ ತೆರಳುತ್ತಾರೆ. ನಾವುಗಳು ಕೂಡ ಬೆಂಗಳೂರಿಗೆ ಬಂದಾಗ ನನ್ನನ್ನು ನೋಡಿದ ನನ್ನ ಕೆಲವು ಪರಿಚಯಸ್ತರು ''ಏನ್ರಿ ಸ್ವಲ್ಪ ತೂಕ ಇಳಿಸಿ ಕೊಂಚ ಸಣ್ಣ ಆದಹಾಗ್ ಇದೆ'' ಎಂದು ದೊಡ್ಡ ಮನಸ್ಸಿನ ಮಹಾನುಭಾವರು ಹೇಳಿದಾಗ ಆ 'ಕೊಂಚ' ಅನ್ನುವುದು ನನ್ನ ಕಿವಿಗೆ ಆಪ್ಯಯಮಾನವಾಗಿ ಹಾಗೂ ಅತ್ಯಂತ ಹಿತವಾಗಿ ಕೇಳಿಸಿ ನನ್ನ ಜಿಮ್ಮಿನಲ್ಲಿ ಮಾಡಿದ ಕಸರತ್ತಿನ ಪರಿಗಳೆಲ್ಲಾ ಫ್ಲಾಶ್ ಬ್ಯಾಕಿನಂತೆ ಕಣ್ಣಮುಂದೆ ನುಗ್ಗಿ, ಆ ಪದವನ್ನೇ ಕೊಂಚ ಹೊತ್ತು (ನನ್ನ ತೂಕ ಹೊರುವ) ಟೊಂಗೆಯನ್ನಾಗಿಸಿಕೊಂಡು ಜೀಕುತ್ತಾ ಇರಲು ನನ್ನಲ್ಲಿ ಏನೋ ಸಾರ್ಥಕ್ಯ ಭಾವ, ಸ್ವಲ್ಪ ಹೊತ್ತಿನಲ್ಲೇ ಎಚ್ಚೆತ್ತುಕೊಂಡು ನನಗಾದ ಸಿಕ್ಕಾಪಟ್ಟೆ ಖುಷಿಯನ್ನು ತಡೆಯಲಾರದೆ, ಪದಗಳು ಬಾಯಿಂದ ತಕ್ಷಣ ಹೊರಡದೆ ಅವರತ್ತ ಕೃತಜ್ಞತೆಯಿಂದ ನೋಡುತ್ತೇನೆ.

ಆದರೆ ಇದು ನಾ ರಜಕ್ಕೆ ಬಂದ ಹೊಸದರಲ್ಲಿ ಇರುವ ಸೀನು. ಆದರೆ ಕ್ರಮೇಣ 1 ಅಥವಾ ಕೆಲವೊಮ್ಮೆ ಎರಡು ತಿಂಗಳು ನನ್ನ ರಜೆ ಕಳೆಯುವಷ್ಟರಲ್ಲಿ ಅರ್ಥಾತ್ ನಾನು

ವಾಪಸ್ಸು ಹೊರಡುವ ಸಮಯಕ್ಕೆ ನಾ ಬೆವರು ಸುರಿಸಿ ಜಿಮ್ಮಿನಲ್ಲಿ ಮಾಡಿದ ಕಸರತ್ತೆಲ್ಲಾ ಹೊಳೆಯಲ್ಲಿ ಹುಣಸೇಹಣ್ಣು ತೊಳೆದ ಹಾಗೆ, ಮತ್ತೆ 2 ರಿಂದ 4 ಕೆ.ಜಿ. ತೂಕ ಸ್ವಲ್ಪವೂ ನನ್ನ ಮೇಲೆ ಕರುಣೆ ತೋರದೆ ಏರಿ ಬಿಡುತ್ತದೆ! ಕಾರಣಗಳ ಪಟ್ಟಿ ಬಿಚ್ಚಿಡುತ್ತಾ ಹೋದರೆ ನಮಗೆ ವರ್ಷಕೊಮ್ಮೆ ಭೇಟಿಯಾಗುವ ನೆಂಟರಿಷ್ಟರ ಮನೆಯ ಆದರದ ಅತಿಥಿ ಸತ್ಕಾರ ಒಂದು ಕಡೆಯಾದರೆ, ನಮಗೆ ಅಪರೂಪಕ್ಕೆ ಸಿಗುವ ಮದುವೆ ಮುಂಜಿ ಸಮಾರಂಭಗಳ ಭಾರಿ ಭೋಜನ, ಇನ್ನೂ ಸಾಮಾನ್ಯವಾಗಿ ನಾನು ಬಂದಾಗ ಶ್ರಾವಣ ಮಾಸದ ಭರ್ತಿ ಹಬ್ಬಗಳ ಸೀಸನ್ನು, ಹೀಗಾಗಿ ವಾರಕ್ಕೊಮ್ಮೆ ಹಬ್ಬದ ಸಿಹಿ ಊಟ ಚಪ್ಪರಿಸುವ ಅವಕಾಶ, ಇಷ್ಟೇ ಅಲ್ಲದೆ ಆಗಾಗ ಪಾರ್ಟಿ ಅದು ಇದು ಅನ್ನುತ್ತಾ ಹೊರಗಡೆ ತಿನ್ನುವುದು ಅಬ್ಬಾ ಒಂದೇ ಎರಡೇ, ಇದಕ್ಕಿಂತ ಮತ್ತೇನು ಬೇಕು ಬಿಡಿ ನನ್ನನ್ನು ಮತ್ತೆ ಮೊದಲಿನದಕ್ಕಿಂತಾ ಕೊಂಚ ಹೆಚ್ಚೇ ಗುಂಡಾಗಿಸಲು. ಇನ್ನು ಇಷ್ಟೆಲ್ಲಾ ನಡೆಯುವಾಗ ವ್ಯಾಯಾಮ, ವಾಕಿಂಗ್ ಮಾಡುವ ಮೂಡು ಅಪ್ಪಿ ತಪ್ಪಿಯೂ ಕೂಡ ನನ್ನತ್ತ ಸುಳಿಯದೇ ಎಲ್ಲೋ ಕಾಲು ಮುರಿದುಕೊಂಡು ಮಲಗಿರುತ್ತದೆ! ಇನ್ನೂ ರೌಂಡಾಗುವ ಮುನ್ನ ಎರೆಡು ರೌಂಡಾದರೂ ಪಾರ್ಕಿನಲ್ಲಿ ನಡೆಯುವ ಪರಿಜ್ಞಾನ ಮಂಡೆಗೆ ಬರುವುದೇ ಇಲ್ಲ ರೀ!

ಸರಿ ನಾನು ಮರಳುವ ಸಮಯಕ್ಕೆ ಎಂದಿನಂತೆ ಸಿಕ್ಕಾ ಪಟ್ಟೆ ಶಾಪಿಂಗ್ ಮಾಡಿ ನನ್ನ ಲಗೇಜಿನ ಭಾರ ವಿಪರೀತವಾದಂತೆ ಕಂಡರೂ ಅದು ಎಂದಿಗೂ ನನ್ನ ಏರ್ ಲೈನ್ಸ್ ನಿಗದಿ ಪಡಿಸಿದ ಲಗೇಜಿನ ಗರಿಷ್ಟ ಮಿತಿಯನ್ನು ಮೀರುವುದಿಲ್ಲ ಆದರೆ ನನಗೆ ಈ ಯಾವುದೇ ಕಾಯಿದೆ ಕಾನೂನುಗಳು ಅನ್ವಯಿಸುವುದಿಲ್ಲವಾದ ಕಾರಣ ನಾನು ಭಾರ ಏರಿಸಿಕೊಂಡೇ ಊರಿಗೆ ವಾಪಾಸಾಗುವುದು!

ಇನ್ನು ನಾನು (ಪೆ) ಸೇರಿಸಿಕೊಂಡು ಬಂದ ಈ ಎಕ್ಸ್‌ಟ್ರಾ ತೂಕವನ್ನು ಇಳಿಸಲು ಮತ್ತೆ ಮುಂದಿನ ಬಾರಿ ಭಾರತಕ್ಕೆ ರಜೆಗೆ ಹೋಗುವವರೆಗೂ ಜಿಮ್ಮಿನಲ್ಲಿ ಶುರು ನನ್ನ ಯಥಾ ಪ್ರಕಾರದ ಕಸರತ್ತು. ಒಮ್ಮೊಮ್ಮೆ ಈ ಕಾಲೇಜು ವಿದ್ಯಾರ್ಥಿಗಳು ಹಿಂದಿನ ಒಂದೆರಡು ವರ್ಷದ ಸಬ್ಜೆಕ್ಟ್‌ಗಳನ್ನು ಪಾಸು ಮಾಡದೆ ಉಳಿಸಿಕೊಂಡಿರುವ ಕ್ಯಾರಿ ಓವರ್ ಸಿಸ್ಟಮ್‌ನಂತೆ ನನ್ನದೂ ಎರೆಡು ಮೂರು ವರ್ಷದ ಬ್ಯಾಕ್ ಲಾಗಿನಂತೆ ತೂಕ ಉಳಿದು ಬಿಟ್ಟಿರುತ್ತದೆ. ಹಾಗಾಗಿ ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ನಾನು ಕೂಡ ಮೇನ್ಟೈನ್ ಮಾಡ್ತಾ ಇದ್ದೀನಿ. ಅರರೆ ಮರೆತು ಬಿಟ್ರಾ? ಅದೇ ನನ್ನ ಓವರ್ ವೈಟು ರೀ!

ಸೌಜನ್ಯ: ಅವಧಿ

●

---

**ತಪ್ಪು - ಒಪ್ಪು**

ಅಪರಂಜಿ ಮೇ ಸಂಚಿಕೆಯ 17ನೇ ಪುಟದಲ್ಲಿ ಪ್ರಕಟವಾಗಿರುವ ಪುಸ್ತಕ ಪರಿಚಯದಲ್ಲಿ ಪುಸ್ತಕದ ಶೀರ್ಷಿಕೆ ಕಣ್ತಪ್ಪಿನಿಂದ 'ಅರಿವಿಲ್ಲದ ಸ್ಥಾವರ' ಎಂದಾಗಿದೆ. ಇದನ್ನು ''**ಅಳಿವಿಲ್ಲದ ಸ್ಥಾವರ**'' ಎಂದು ಓದಿಕೊಳ್ಳಬೇಕಾಗಿ ವಿನಂತಿ.

*- ಸಂಪಾದಕರು*

# ರಾಷ್ಟ್ರೀಯ ಗುಳುಂ ಯೂನಿವರ್ಸಿಟಿ

**- ಗೌತಮ**

ಇಂದು 'ರಾಷ್ಟ್ರೀಯ ಗುಳುಂ ಯೂನಿವರ್ಸಿಟಿ'ಯ ಉದ್ಘಾಟನಾ ಸಮಾರಂಭ. ಗುಳುಂಗೆ ಹೆಸರಾದ ಕರ್ನಾಟಕದ ಖ್ಯಾತರು, ಪ್ರಖ್ಯಾತರು, ಸುಖ್ಯಾತರು, ಸುವಿಖ್ಯಾತರು, ಕುಖ್ಯಾತರು, ಅತಿರಥರು, ಮಹಾರಥರೆಲ್ಲ ಉದ್ಘಾಟನೆಗಾಗಿ ನೆರೆದಿದ್ದಾರೆ. ಎಲ್ಲರನ್ನೂ ವೇದಿಕೆಯ ಮೇಲೆ ಕೂರಿಸಿದ್ದಾಯಿತು.

ಪ್ರಾರ್ಥನೆಯ ನಂತರ ಕಪ್ಪು ಟೋಪಿ ಹಾಕಿದ್ದವರೊಬ್ಬರು ವೇದಿಕೆಯನ್ನೇರಿದರು. ನೆರೆದಿದ್ದವರನ್ನೆಲ್ಲ ಕುರಿತು,

'ಮಹನೀಯರೇ, ಮಹಿಳೆಯರೇ, ಇನ್ನು ಕೆಲವೇ ಕ್ಷಣಗಳಲ್ಲಿ ಜನ್ಮ ತಳೆಯುತ್ತಿರುವ ವಿಶ್ವದ ಪ್ರಪ್ರಥಮ 'ರಾಷ್ಟ್ರೀಯ ಗುಳುಂ ಯೂನಿವರ್ಸಿಟಿ'ಯ ಪರಿಚಯ ಮಾಡಿಸುವ ಕೆಲಸ ನನ್ನದಾಗಿರುವುದು ನನಗೆ ಅತೀವ ಸಂತೋಷವನ್ನುಂಟುಮಾಡಿದೆ....'

ಅಷ್ಟರಲ್ಲಿ ವೇದಿಕೆಯ ಮುಂದಿದ್ದ ಒಬ್ಬ ಯುವಕ ಎದ್ದು ನಿಂತು ಜೋರು ಧ್ವನಿಯಲ್ಲಿ 'ಸ್ವಾಮಿ, ರಾಷ್ಟ್ರೀಯ ಗುಳುಂ ಯೂನಿವರ್ಸಿಟಿ ಅಂತ ಹೆಸರಿಟ್ಟುಬಿಟ್ಟು ಕೇವಲ ಕರ್ನಾಟಕದವರನ್ನು ಮಾತ್ರ ಆಹ್ವಾನಿಸಿರುವುದು ಸರಿಯಲ್ಲ. ಕಡೇ ಪಕ್ಷ ಎಲ್ಲ ರಾಜ್ಯಗಳ ಕ್ಯಾತರನ್ನೂ ಕರೆಯಬೇಕಿತ್ತಲ್ಲವೇ' ಅಂದ. ಅವನ ಸುತ್ತ ಇದ್ದ ಅವನ ಪಟಾಲಂ 'ಹೌದು ಹೌದು' ಎಂದು ಒಕ್ಕೊರಲಿನಿಂದ ಕಿರುಚಿದರು. ಕಪ್ಪು ಟೋಪಿಯವರು ಒಂದು ಚೂರೂ ಹೆದರದೆ, ಕದಲದೆ, ಎರಡೂ ಕೈಗಳನ್ನು ಆಶೀರ್ವದಿಸುವ ಭಂಗಿಯಲ್ಲಿ ಎತ್ತಿ 'ಸಮಾಧಾನ ಸಮಾಧಾನ' ಎಂದರು. ಪೃಚ್ಛಕರು ಕ್ಷಣಕಾಲ ಸುಮ್ಮನಾದರು. ಕಪ್ಪು ಟೋಪಿಯವರು ಮುಂದುವರಿಸಿ 'ನೋಡಿ, ನೀವು ಒಳ್ಳೆ ಮಾತನ್ನೇ ಹೇಳಿದಿರಿ. ಇದು ಪ್ರಾರಂಭಿಕ ಹಂತ. ಮತ್ತು ಇದು ಪ್ರಾಯೋಗಿಕವಾಗಿ ಪ್ರಾರಂಭವಾಗುತ್ತಿರುವ ಸಂಸ್ಥೆ. ಸಧ್ಯಕ್ಕೆ ಇದು ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿದೆ. ನಂತರದ ದಿನಗಳಲ್ಲಿ, ಇದು ದೇಶವನ್ನು, ಆನಂತರದ ಕೆಲವೇ ತಿಂಗಳುಗಳಲ್ಲಿ ಇಡೀ ವಿಶ್ವವನ್ನೇ ವ್ಯಾಪಿಸಲಿದೆ ಎಂಬ ಆತ್ಮವಿಶ್ವಾಸ ನಮಗೆಲ್ಲರಿಗೂ ಇದೆ' ಎಂದಾಗ ಎಲ್ಲರೂ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಕಪ್ಪು ಟೋಪಿಯವರು ಮುಂದುವರಿಯುತ್ತಾ, 'ತಿನ್ನುವ ಕಲೆಯನ್ನು ಕರಗತ ಮಾಡಿಕೊಳ್ಳಲು ಆಸಕ್ತಿ ತೋರಿ, ನಮ್ಮ ಯೂನಿವರ್ಸಿಟಿಗೆ ಸೇರಲು ನಮ್ಮ ನಿರೀಕ್ಷೆಗೂ ಮೀರಿ ಬಂದಿರುವ ನಿಮಗೆಲ್ಲಾ ಸ್ವಾಗತ ಕೋರುತ್ತೇನೆ ಹಾಗೂ ಶುಭ ಹಾರೈಸುತ್ತೇನೆ.'

ಮೊದಲಿಗೆ, ಈ ಕಾಲೇಜು ಸ್ಥಾಪಿಸುತ್ತಿರುವ ಮುಖ್ಯ ಉದ್ದೇಶವನ್ನು ಚಿಕ್ಕದಾಗಿ ನಿಮ್ಮ ಮುಂದಿಡಲು ಬಯಸುತ್ತೇನೆ.

ಮನುಷ್ಯ ಬದುಕುವುದು ತಿನ್ನಲಿಕ್ಕೋ ಅಥವಾ ಮನುಷ್ಯ ತಿನ್ನುವುದು ಬದುಕಲಿಕ್ಕೋ ಎಂಬ ಜಿಜ್ಞಾಸೆ ಇಂದು ನಿನ್ನೆಯದಲ್ಲ. ಇದರ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ವಾಸ್ತವ ವಾಸ್ತವವೇ. ಹಾಗಾಗಿ ಕ್ಲೀಷೆಯನ್ನು ನಾವು ಇನ್ನಷ್ಟು ಕ್ಲೀಷೆ ಮಾಡುವುದು ಬೇಡ. ವಿಷಯಕ್ಕೆ ಬರೋಣ. 'ತಿನ್ನುವುದು' ಎನ್ನುವುದಕ್ಕೆ ನುಂಗುವುದು, ನುಂಗಿಹಾಕುವುದು, ನುಂಗಿ ನೀರು ಕುಡಿಯುವುದು, ಗುಳುಂ ಮಾಡುವುದು, ಮಂಗಮಾಯ ಮಾಡುವುದು, ಸ್ವಾಹಾ ಮಾಡುವುದು ಇತ್ಯಾದಿ ಇತ್ಯಾದಿ ಬೇರೆ ಬೇರೆ ಪದಗಳಿವೆ. ಈ ನುಂಗುವುದೂ ಒಂದು ಕಲೆಯೇ. ಈ ಕಲೆ ನಮ್ಮಲ್ಲಿ ಅನಾದಿಕಾಲದಿಂದ ಇದ್ದರೂ ಇದನ್ನು ಕಲಿಸುವ ಒಂದು ವ್ಯವಸ್ಥೆಯ ಕುರಿತು ಇದುವರೆಗೂ ಪ್ರಪಂಚದಲ್ಲಿ ಯಾರೂ ಚಿಂತಿಸದಿರುವುದು ವಿಪರ್ಯಾಸವೇ ಸರಿ. ನಮ್ಮಗಳ ಮಧ್ಯೆ, ನಮ್ಮಗಳ ಸುತ್ತ ಮುತ್ತ ಹಾಗೂ ನಮ್ಮೊಳಗೇ ಇರುವ ಅನೇಕ ಚಿಂತಕರು ಸೇರಿ ಯೂನಿವರ್ಸಿಟಿಯನ್ನು ಸ್ಥಾಪಿಸುವ ಪ್ರಸ್ತಾಪವನ್ನು ಮುಂದಿಟ್ಟರು. ದೂಸ್ರಾ ಮಾತಿಲ್ಲದೆ ಈ ಪ್ರಸ್ತಾಪಕ್ಕೆ ಅನುಮತಿ ದೊರಕಿತು. ಅಷ್ಟೇ ಅಲ್ಲದೇ ಈ ಕಾಲೇಜನ್ನು ಸ್ಥಾಪಿಸುವುದಕ್ಕೋಸ್ಕರ ನೂರು ಕೋಟಿ ರುಪಾಯಿಗಳನ್ನೂ ಬಿಡುಗಡೆ ಮಾಡಲಾಗಿದೆ. ಅದಕ್ಕಾಗಿ ನಾವು ನೀವೆಲ್ಲ ಸರ್ಕಾರಕ್ಕೆ ಚಿರಋಣಿಗಳಾಗಿರಬೇಕು. ಇರಲಿ.

ತಿನ್ನುವುದು ಒಂದು ಕಲೆ ಎಂದು ನಿಮಗೀಗಾಗಲೇ ಹೇಳಿದ್ದೀನಿ. ಅದನ್ನು ಅಚ್ಚುಕಟ್ಟಾಗಿ ಹೇಳಿಕೊಡುವುದೇ ಈ ಯೂನಿವರ್ಸಿಟಿಯ ಮುಖ್ಯ ಉದ್ದೇಶ. ತಿನ್ನುವ ಪ್ರಮಾಣವನ್ನನುಸರಿಸಿ ತಿನ್ನುವವರನ್ನು ಮೀನು, ಇಲಿ, ಹೆಗ್ಗಣ, ತಿಮಿಂಗಲ ಮುಂತಾದ ಅನೇಕ ಹೆಸರುಗಳಿಂದ ಜನ ಕರೆಯುತ್ತಾರೆ. ಅದರ ಬಗ್ಗೆ ಚಿಂತೆ ಬೇಡ.

ತಿನ್ನುವ ಮೂಲ ಉದ್ದೇಶ ತಿಂದಿರುವುದು ಯಾರಿಗೂ ಗೊತ್ತಾಗಬಾರದೆಂಬುದೇ ಆಗಿದೆ! ಯಾರಿಗೂ ಗೊತ್ತಾಗದಿರಬೇಕಾದರೆ ಅದನ್ನು ತಿಂದಿರುವ ಗುರುತು ನಮ್ಮ ಮುಖದ ಮೇಲಾಗಲೀ, ಬಟ್ಟೆಯ ಮೇಲಾಗಲೀ ಮೂಡದಂತೆ ನೋಡಿಕೊಳ್ಳಬೇಕಾಗಿರುವುದು ಮುಖ್ಯ. ತಿನ್ನುವಾಗ ಅನುಸರಿಸಬೇಕಾಗಿರುವ ಕೆಲವು ನಿಯಮಗಳನ್ನು ಈಗ ಚಿಕ್ಕದಾಗಿ ಹೇಳುತ್ತೇನೆ. ಕ್ಲಾಸಿನಲ್ಲಿ ಇನ್ನೂ ವಿಶದವಾಗಿ, ಉದಾಹರಣೆಗಳ ಸಹಿತ ವಿವರಿಸಲಾಗುವುದು.

ಒಂದು: ತಿನ್ನುವ ಮುಂಚೆ ತಿನ್ನದವರು ಯಾರಾದರೂ ನಿಮ್ಮ ಮುಂದಿದ್ದರೆ, ಮೊಟ್ಟಮೊದಲ ಕೆಲಸ, ಅಂಥವರನ್ನು ಆಚೆಗಟ್ಟುವುದು. ತಿನ್ನಲಾಗದವರು ತಿನ್ನುವವರಿಗೆ ಯಾವಾಗಲೂ ಕಂಟಕರೇ.

ಎರಡು: ಎಳೆಯ ಮಕ್ಕಳಿಗೆ ಹಾಲು ಕುಡಿಸುವ ಅಥವಾ ಬುಯ್ಯ ತಿನ್ನಿಸುವ ಮುಂಚೆ ಎದೆಯ ಮೇಲೆ ಬರುವಂತೆ ಒಂದು ಬಟ್ಟೆಯನ್ನು ಕಟ್ಟುವಂತೆ ಒಂದು ಬಟ್ಟೆಯನ್ನು ಕಟ್ಟಿಕೊಳ್ಳಬೇಕು. ಆಗ, ಮೈ ಮೇಲಿನ ಬಟ್ಟೆ ಕೊಳೆಯಾಗುವುದಿಲ್ಲ, ನಿಮ್ಮ ಗುಟ್ಟು ಬಟ್ಟಬಯಲಾಗುವುದಿಲ್ಲ.

ಮೂರು: ಕೈಯಲ್ಲಿ ತಿನ್ನುವುದಾದರೆ, ತುತ್ತನ್ನು ಸಾವಧಾನದಿಂದ ಎತ್ತಿಕೊಳ್ಳಬೇಕು. ತಲೆಯನ್ನು ತಟ್ಟೆಯ ಮೇಲೆ ತಂದು ತಲೆಯನ್ನು ಮೇಲೆತ್ತಿ ಬಾಯನ್ನು ಅಗಲವಾಗಿ ತೆಗೆದು,

ಬಾಯಿಂದ ಆಚೆಗೆ ಬೀಳದಂತೆ ತುತ್ತನ್ನು ಬಾಯಲ್ಲಿ ಹಾಕಿಕೊಳ್ಳಬೇಕು. ತಕ್ಷಣ ಬಾಯನ್ನು ಮುಚ್ಚಿಕೊಂಡು ಅಗಿದೋ ಜಗಿದೋ ನುಂಗಬೇಕು. ಸ್ವಲ್ಪ ಆಚೆಗೆ ಬಂದು ನಿಮ್ಮ ಬಟ್ಟೆಯ ಮೇಲೆ ಬಿದ್ದರೆ ನಿಮ್ಮ ಹೆಸರು ಬೀದಿಗೆ ಬರತ್ತೆ. ಚಮಚದಲ್ಲಿ ತಿನ್ನುವುದಾದರೂ ಅಷ್ಟೆ, ಬಹಳ ಎಚ್ಚರಿಕೆಯಿಂದ ಒಂದು ಚೂರೂ ಚೆಲ್ಲದ ಹಾಗೆ ತಿನ್ನಬೇಕು. ತಪ್ಪಿದಿರೋ ನಿಮ್ಮ ಚಮಚಗಳೇ ನಿಮ್ಮ ಮೇಲೆ ತಿರುಗಿಬಿದ್ದಾರು. ಕೈಯಿಂದ ಬಾಯಿಗೆ ಸಾಗಿಸುವಾಗ ಆಕಸ್ಮಾತ್ ತಟ್ಟೆಯಲ್ಲಿ ಬಿದ್ದರೆ ತಟ್ಟೆಯಲ್ಲಿರುವುದು ನಮ್ಮ ಬಟ್ಟೆಯ ಮೈ ಮೇಲೆ ಎಗರುತ್ತದೆ, ಬಟ್ಟೆ ಹಾಳಾಗುತ್ತದೆ. ಅಂದರೆ, ಎಲ್ಲವೂ ಹಾಳಾದಂತೆಯೇ ಅಲ್ಲವೇ?

ನಾಲ್ಕು: ತಿನ್ನುವ ಪದಾರ್ಥ ದ್ರವಪದಾರ್ಥವಾದರೆ, ಉದಾಹರಣೆಗೆ: ಜಾಮೂನು, ರಸಗುಲ್ಲ, ಕಾಫಿ, ಟೀ, ಹಣ್ಣಿನ ರಸ, ಮಜ್ಜಿಗೆ ಇತ್ಯಾದಿ, ಎತ್ತಿಕೊಂಡು ಕುಡಿಯೋ ಸಾಹಸಕ್ಕೆ ಕೈ ಹಾಕಬೇಡಿ. ಒಂದು ಸ್ವಲ್ಪ ಅಲುಗಾಡಿದರೂ ಮೇಮೇಲೆ ಬೀಳುವುದು ಗ್ಯಾರಂಟೀ. ಕಚ್ಚಿಕೊಂಡೇ ಕುಡಿಯಿರಿ. ಕುಡಿದ ತಕ್ಷಣ ಬಟ್ಟೆ(ತೊಟ್ಟ ಬಟ್ಟೆಯಿಂದಲ್ಲ)ಯಿಂದ ಮೂತಿಯನ್ನು ಒರೆಸಿಕೊಳ್ಳಿ. ಇಲ್ಲವಾದರೆ, ಮೀಸೆಯ ಮೇಲೆ ಕೂತಿರುವ ದ್ರವದ ಹನಿಗಳು ಮೈಮೇಲೆ ಬೀಳುತ್ತೆ. ಇಲ್ಲದ ಹಗರಣವೂ ಮೈಮೇಲೆ ಬೀಳತ್ತೆ.

ಐದು: ತಿನ್ನುವ ಮುಂಚೆ ನಿಮ್ಮ ಕೆಪಾಸಿಟಿಯನ್ನು ಗಮನದಲ್ಲಿಟ್ಟುಕೊಂಡು ಅಷ್ಟಕ್ಕೆ ಮಾತ್ರ ಕೈ ಹಾಕಿ. ಇಲ್ಲದಿದ್ದರೆ ಪೂರ್ತಿ ನುಂಗಲಾಗದೆ ಬಿಡಲೂ ಆಗದೆ ನಿಮ್ಮ ತಾಕತ್ತು ಜಗಜ್ಜಾಹೀರಾಗಿಬಿಡತ್ತೆ.

ಆರು: ತಿನ್ನುವ ಅಥವಾ ಕುಡಿಯು ಪಾತ್ರೆಯನ್ನು ಸಂಪೂರ್ಣವಾಗಿ ಖಾಲಿ ಮಾಡಿ. ತಿಂದ ಅಥವಾ ಕುಡಿದ ಯಾವ ಸೂಚನೆಯೂ ಅದರಲ್ಲಿರಬಾರದು. 'ಇದರಲ್ಲೇನಾದರೂ ಇತ್ತೇ?' ಅಂತ ಕೇಳೋ ತರಹ ನೆಕ್ಕಿಬಿಡಬೇಕು, ಇಲ್ಲವೇ ಬಡಿದು ಬಾಯಿಗೆ ಹಾಕಿಕೊಂಡುಬಿಡಬೇಕು.

ಏಳು: ಇವನ್ನೆಲ್ಲ ವಿಸ್ತೃತವಾಗಿ ಥಿಯರಿ ಕ್ಲಾಸ್‌ಗಳಲ್ಲಿ ಹೇಳಿಕೊಡ್ತೀವಿ. ಆಮೇಲೆ ಪ್ರಾಕ್ಟಿಕಲ್ಲೂ ಇರತ್ತೆ. ಅದರಲ್ಲಿ, ನಿಮ್ಮಗಳನ್ನ ಹೈದರಾಬಾದ್‌ಗೆ ಕಳಿಸಿ, ಮೀನು ನುಂಗುವುದನ್ನು ತೋರಿಸಲಾಗತ್ತೆ. ಬರೀ ಮೀನನ್ನೇ ಏನು, ನೀವು ತಿಮಿಂಗಲಗಳನ್ನೇ ನುಂಗುವಿರಿ. ಅದರಲ್ಲಿ ನಮಗನುಮಾನವೇನಿಲ್ಲ. ಕೋರ್ಸಿನ ಕೊನೆಯಲ್ಲಿ, ನೆಲ ನುಂಗುವುದನ್ನು, ಬಿಲ್ಡಿಂಗುಗಳನ್ನು ಗುಳುಂ ಮಾಡುವುದನ್ನು, ಬ್ಯಾಂಕ್‌ನಲ್ಲಿನ ಹಣವನ್ನು ಮಂಗಮಾಯ ಮಾಡುವುದನ್ನು, ಬಾವಿಗಳನ್ನೇ ಇಲ್ಲವಾಗಿಸುವುದನ್ನು, ರಸ್ತೆಗಳನ್ನು ಸ್ವಹಾ ಮಾಡುವುದನ್ನು ಹೇಳಿಕೊಡಲಾಗುವುದು.

ಒಂದು ಸಂತೋಷದ ಸುದ್ದಿ. ಎಲ್ಲ ಯೂನಿವರ್ಸಿಟಿಗಳಲ್ಲಿದ್ದಂತೆ ಇಲ್ಲಿ ಪರೀಕ್ಷೆ ಗಿರೀಕ್ಷೆಗಳೊಂದೂ ಇಲ್ಲ. ಅದರ ಅವಶ್ಯಕತೆಯೂ ನಿಮಗಿರುವುದಿಲ್ಲ. ಕೋರ್ಸ್ ಮುಗಿಯುವಷ್ಟರಲ್ಲಿ ನೀವೆಲ್ಲಾ ಗುಳುಂ ಮಾಡುವುದರಲ್ಲಿ ಎಕ್ಸ್‌ಪರ್ಟ್ಸ್ ಆಗಿರ್ತೀರಿ. ಹಾಗಾಗಿ, ಸರ್ಟಿಫಿಕೇಟುಗಳನ್ನೂ ನಿಮಗೆ ಕೊಡುವುದಿಲ್ಲ.

ಮುಂದಿನ ವರ್ಷಗಳಲ್ಲಿ ದೇಶ ಅಭಿವೃದ್ಧಿ ಹೊಂದುತ್ತಿದ್ದಂತೆ, ಹೊಸ ಹೊಸ ಆವಿಷ್ಕಾರಗಳಾಗುತ್ತಿದ್ದಂತೆ, ಅವುಗಳಿಗೆ ತಕ್ಕಂತೆ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಲಿದ್ದೇವೆ.

ಈಗ ವೇದಿಕೆಯ ಮೇಲೆ ಉಪಸ್ಥಿತರಿರುವ ಎಲ್ಲ ಗುಳುಂ ಎಕ್ಸ್‌ಪರ್ಟ್ಸ್‌ಗಳೂ ಜಾಮೂನನ್ನು ಒಂದೇ ಏಟಿಗೆ ಗುಳುಂ ಮಾಡುವುದರ ಮೂಲಕ ಈ ಯೂನಿವರ್ಸಿಟಿಯನ್ನು ಉದ್ಘಾಟಿಸಬೇಕೆಂದು ಕೋರುತ್ತೇನೆ.

ಎಲ್ಲರೂ ಜಾಮೂನುಗಳನ್ನು ನುಂಗುತ್ತಿದ್ದಂತೆ ಭಾವಿ ಗುಳುಂ ಪದವೀಧರರಿಂದ ಭಾರೀ ಕರತಾಡನ.

●



# ನಗುವುದಾದರೆ ನಕ್ಕು ಬಿಡಿ

**- ಎಚ್.ಜಿ. ಸೋಮಶೇಖರ ರಾವ್**

**ಕೆ**ಲವು ಹಾಸ್ಯದ ಚುಟುಕಗಳು: ಓದಿ ನಗುವುದಿದ್ದರೆ ನಕ್ಕು ಬಿಡಿ.

- ❑ ಬ್ರಹ್ಮಚಾರಿಯಾಗಿರಲಿಕ್ಕೆ ಒಂದು ಮುಖ್ಯಕಾರಣ ಹಾಗೂ ಅನುಕೂಲ ಏನೆಂದರೆ ಅವನು ಹಾಸಿಗೆಯಿಂದ ಯಾವ ಮಗ್ಗುಲಿನಿಂದಾದರೂ ಏಳಬಹುದು!
- ❑ ಚೆಲುವಾದ ಹುಡುಗಿ - ಲವ್ ಅಟ್ ಫಸ್ಟ್ ಸೈಟ್ ಆಗುವಂಥ ರೂಪ. ಕವಿಯಾಗಿದ್ದವನು ಅವಳನ್ನು ನೋಡಿದರೆ ಸಾಕು ಕಾವ್ಯಧಾರೆ ಹರಿಸಿಬಿಡುತ್ತಿದ್ದ. ಆದರೆ ಆಕೆ ಬಾಯಿಬಿಟ್ಟರೆ ಬಣ್ಣಗೇಡು. ಬರ್ನಾರ್ಡ್ ಷಾ ಅಂಥವನು ಅವಳನ್ನು ಭೇಟಿಯಾಗಿದ್ದರೆ ಹೀಗೆ ಉದ್ಗಾರ ತೆಗೆಯುತ್ತಿದ್ದ - ''ಗಾಡ್ ಹ್ಯಾಸ್ ವೇಸ್ಟೆಡ್ ಬ್ಯೂಟಿ ಆನ್ ಹರ್'' ಅಂತ!
- ❑ ಪಂಚತಾರ ಹೋಟೆಲ್‌ಗೆ ಹೋಗಿದ್ದ ಒಬ್ಬಾತ ತಾನಿದ್ದ ಮೂರು ದಿನಗಳ ವಾಸ್ತವ್ಯಕ್ಕೆ ಸಾವಿರಗಟ್ಟಲೆ ಬಿಲ್ ತೀರಿಸಿ ರೂಮಿನಿಂದ ಹೊರಟಾಗ ಬಾಗಿಲಿನಲ್ಲಿ ಒಂದು ಫಲಕ ಜೋತು ಹಾಕಿದ್ದನ್ನು ಕಂಡ. ಅದರ ಮೇಲೆ ಹೀಗೆ ಒಂದು ಬರಹವಿತ್ತು. ''ಹ್ಯಾವ್ ಯು ಲೆಫ್ಟ್ ಎನಿತಿಂಗ್?'' ಎಂದು. ಇದ್ದ ಹಣವನ್ನೆಲ್ಲಾ ಕೊಟ್ಟು ಬರಿಗೈಲಿ ಹೊರಟಿದ್ದ ವ್ಯಕ್ತಿ. ''ದೇರ್ ಇಸ್ ನತಿಂಗ್ ಲೆಫ್ಟ್ ವಿತ್ ಮಿ'' ಎಂದು ಬರೆದನಂತೆ.
- ❑ ಒಬ್ಬ ಪ್ರಸಿದ್ಧ ಬರಹಗಾರ ಬ್ರಹ್ಮಚಾರಿಯನ್ನು ಒಂದು ಪ್ರಶ್ನೆ ಕೇಳಲಾಯಿತು. ''ಮದುವೆಯಾಗದೆ ನಿಮಗೆ ಏನನ್ನು ಕಳೆದು ಕೊಂಡಂತಾಗಿದೆ?'' ಎಂದು. ಅದಕ್ಕೆ ಬರಹಗಾರನು ಹೇಳಿದ್ದು: ''ಏನೂ ಇಲ್ಲ... ಐ ಹ್ಯಾವ್ ಮಿಸ್ಸಡ್ ಆ್ಯನ್ ಆಪರ್‍ಚುನಿಟಿ ಟು ಮೇಕ್ ಸಮ್ ವುಮೆನ್ ಮಿಸೆರಬಲ್!!''
- ❑ ನಿಪುಣ, ಚತುರ ವ್ಯಕ್ತಿಯೊಬ್ಬರ ಬಗ್ಗೆ ಪ್ರಸಿದ್ಧ ಲೇಖಕನೊಬ್ಬ ಹೇಳಿದ್ದು: ''ಆ್ಯನ್ ಎಕ್ಸ್‌ಪರ್ಟ್ ಇಸ್ ಒನ್ ಹು ಬಾರೋಸ್ ಯುವರ್ ವಾಚ್, ಟೆಲ್ಸ್ ಯು ಟೈಮ್ ಅಂಡ್ ದೆನ್ ವಾಕ್ಸ್ ಅವೇ ವಿತ್ ದಟ್ ವಾಚ್.''
- ❑ ''ಅಯೋಗ್ಯ... ನಿನಗೆ ಯಾವ ಕೆಲಸವನ್ನೂ ಮಾಡಲು ಬರೋದಿಲ್ಲ...'' ಅಂತ ಮಾಲೀಕ ಸಿಬ್ಬಂದಿಯೊಬ್ಬನನ್ನು ಸಿಕ್ಕಾಪಟ್ಟೆ ಬಯ್ದಾಗ ಸಿಬ್ಬಂದಿ ತಡೆದುಕೊಳ್ಳಲಾರದೆ ಸಿಟ್ಟಿನಿಂದ ''ಬಿಡಿ ಸಾರ್, ನಿಮ್ಮ ಮನೆಯಲ್ಲಿ ನನ್ನನ್ನು ನಿಮ್ಮ ಹೆಂಡತಿಯೂ ಹೀಗೆ ಬಯ್ಯುತ್ತಾರೆ'' - ಅಂದು ಬಿಟ್ಟ.
- ❑ ಆಸ್ಪತ್ರೆಯಲ್ಲಿ ಶಸ್ತ್ರಕ್ರಿಯೆ ಮಾಡುವ ವೈದ್ಯರೂ ಹಾಗೂ ಅವರ ಸುತ್ತಲಿರುವ ಇತರರೂ ಮುಖಕ್ಕೆ ಮುಸುಕು ಹಾಕಿರುತ್ತಾರಲ್ಲ ಏಕೆ ಎಂಬ ಪ್ರಶ್ನೆಗೆ ಶಸ್ತ್ರಕ್ರಿಯೆ ಮಾಡಿಸಿಕೊಂಡವನು ಕೊಟ್ಟ ಉತ್ತರ: ''ಸ್ವಾಮಿ... ಯಾರು ತಪ್ಪು ಮಾಡಿದ್ದಾರೆಂಬುದು ಗೊತ್ತಾಗದಿರಲೆಂದು!''

- ನನಗೆ ನನ್ನ ಹಿರಿಯ ಗೆಳೆಯ ಪತ್ರಕರ್ತ ವೈ.ಎನ್.ಕೆ. ಹೇಳಿದ 'ದಿನಚರಿ'ಯನ್ನು ಹೇಳಬೇಕೆನಿಸಿದೆ:

  ಅರ್ಲಿ ಮಾರ್ನಿಂಗ್ — ರನ್ ಫಾರ್ ಲೈಫ್

  ಡ್ಯುರಿಂಗ್ ದ ಡೇ — ಪೆನ್ ಫಾರ್ ಲೈಫ್

  ಈವ್ನಿಂಗ್ ದ ಡೇ — ರಮ್ ಫಾರ್ ಲೈಫ್

- ಅಳಿಯ ಮಾವನ ಮನೆಗೆ ಹೋಗಿದ್ದಾಗ ಮಾವ ತನ್ನ ಮನೆತನದ ಹಳೇ ಫೋಟೋ ಆಲ್ಬಮ್ ತೋರಿಸಿದರು. ಮಸುಕು ಮಸುಕಾಗಿರುವ ಒಂದು ಫೋಟೋದಲ್ಲಿ ಒಬ್ಬ ವ್ಯಕ್ತಿ – ಮಾವನ ಅಜ್ಜ – ತನ್ನ 12 ಮಕ್ಕಳ ಜೊತೆಗಿದ್ದದ್ದನ್ನು ನೋಡಿದ ಅಳಿಯ ಮಾವನನ್ನು ಕೇಳಿದ – ''ಇಷ್ಟೊಂದು ಮಕ್ಕಳು ಇವರಿಗೆ... ಇವರು ಹಗಲ್ಹೊತ್ತು ಏನು ಕೆಲಸ ಮಾಡಿಕೊಂಡಿದ್ದರು!''

- ''ಹಾಲು ಮಾರೋಕೆ ಅಂತ ಹತ್ತಾರು ಕಡೆ ಸುತ್ತಿ ಸುತ್ತಿ ಮಾರ್ತಾರೆ ಹಾಲು, ಅಲ್ಲಿ-ಇಲ್ಲಿ ಸುತ್ತಿ ಸುಸ್ತಾಗಿ ಹತ್ತಿ ಹತ್ತಿ ಹೋಗ್ತಾರೆ ಕುಡಿಯೋಕ್ಕೆ ಆಲ್ಕೋಹಾಲು.''

- ಲಗ್ನವಾಗಿ ಸಂಸಾರ ಹೂಡಿದ ಮಹಿಳೆಯನ್ನು ಒಂದು ಪ್ರಶ್ನೆ ಕೇಳುತ್ತಾರೆ: ''ಎರಡು ವಸ್ತುಗಳು ಒಂದೇ ಕಡೆ ಇರಲು ಸಾಧ್ಯವಿಲ್ಲ. ಉದಾಹರಣೆ ಕೊಡ್ತೀರ?'' ಆ ಹೆಂಗಸು... ನನ್ನ ''ಅತ್ತೆ-ಮಾವ'' ಎಂದು ಉತ್ತರಿಸುತ್ತಾಳೆ!

- ಅಸ್ಪೃಶ್ಯತೆ ಬಗ್ಗೆ ಒಂದು ಉದಾಹರಣೆ ಕೊಡಿ ಎಂಬ ಒಂದು ಪ್ರಶ್ನೆಗೆ ಒಬ್ಬ ಕೊಟ್ಟ ಉತ್ತರ: ''ನಮ್ಮ ಅಜ್ಜಿ ಯಾವಾಗಲೂ ಮಡಿ-ಮಡಿ ಅಂತ ಯಾರನ್ನೂ ಮುಟ್ಟಿಸಿಕೊಳ್ಳೋಲ್ಲ, ಅಷ್ಟೇ ಅಲ್ಲ ಸೊಸೆ ತಿಂಗಳಿಗೊಮ್ಮೆ ಹೊರಗಾದಾಗ ಆಕೆ ರೂಮು ಬಿಟ್ಟು ಬರುವ ಹಾಗಿಲ್ಲ... ಅವಳನ್ನೂ ಯಾರೂ ಮುಟ್ಟಿಸಿ ಕೊಳ್ಳುವ ಹಾಗಿಲ್ಲ.''

- ಏನ್ರೀ... ನಿಮ್ಮ ಬಲ ಕಿವಿ ಮುಚ್ಚಿಕೊಂಡು ಸಂಗೀತ ಕೇಳ್ತೀರಲ್ಲಾ... ಯಾಕೆ? ಕಚೇರಿಯಲ್ಲಿ ಕೂತು ಸಂಗೀತ ಕೇಳುತ್ತಿದ್ದವ ಹೇಳಿದ: ''ಅಯ್ಯಾ ನನ್ನ ಪಕ್ಕ ಕೂತಿದ್ದ ವ್ಯಕ್ತಿ... ಇದಾವ ರಾಗ... ಈ ರಾಗ ಅವರು ಚೆನ್ನಾಗಿ ಹಾಡ್ತಾರೆ... ನಾನು ಕೊಯಮತ್ತೂರಲ್ಲಿದ್ದಾಗ...'' ಅಂತ ವಿಪರೀತ ಮಾತಾಡುವುದನ್ನು ಕೇಳಿಸಿಕೊಳ್ಳದಿರಲು ಕಿವಿ ಮುಚ್ಚಿಕೊಳ್ಳುತ್ತೇನೆ...?''

- ದೇವರು ಭಕ್ತನ ಕನಸಿನಲ್ಲಿ ಕಾಣಿಸಿಕೊಂಡು... ''ನನಗಾಗಿ ನೀನು ಒಂದು ಭವ್ಯ ಮಂದಿರ ಕಟ್ಟಿಸಬೇಕು'' ಎಂದ. ಭಕ್ತ ಆಯಿತು ಅಂದ. ನಿರ್ಮಾಣದ ಕೆಲಸ ಆರಂಭವಾಯ್ತು ವರ್ಷಗಳಾದವು... ಮಂದಿರ ಪೂರ್ಣವಾಗಲಿಲ್ಲ, ಭಗವಂತನಿಗೆ ಬೇಸರವಾಗಿ ಕನಸಲ್ಲಿ ಬಂದು ಕೇಳಿದ. ''ಏನಯ್ಯ ಭಕ್ತ, ಇನ್ನೂ ಮಂದಿರ ಆಗಲಿಲ್ವಾ?'' ''ಭಗವಂತ, ತಪ್ಪು ತಿಳಿಯಬೇಡಿ ಪ್ರಯತ್ನ ನಡೆದಿದೆ'' ''ಏನ್ ಮಾತಾಡ್ತಾ ಇದ್ದಿ.... ನನಗೆ ಸಿಟ್ಟು ತರಿಸಬೇಡ. ನಿನ್ನನ್ನು ನಿರ್ನಾಮ ಮಾಡಿಬಿಡುತ್ತೇನೆ.''

ದೇವರೇ, ಹಾಗೆ ಮಾಡಬೇಡಿ. ನನ್ನ ಮಾತನ್ನು ಕೇಳಿ.... ಸಿಟ್ಟಾಗಬೇಡಿ.... ಸೈಟಿಗಾಗಿ ಬಹಳ ಕಷ್ಟಪಟ್ಟು.. ಅದಕ್ಕಾಗಿ ಲಂಚಕೊಟ್ಟೆ.. ಸೈಟು ಸಿಕ್ತು... ಕಟ್ಟಡ ಪ್ರಾರಂಭಿಸಿದೆ... ಪ್ಲಾನ್ ಕೊಟ್ಟಿದ್ದೆ.. ಅಧಿಕಾರಿಗಳು ಮನಸ್ಸಿಗೆ ಬಂದ ಹಾಗೆ ಬದಲಾಯಿಸಿದರು... ಮತ್ತಿಷ್ಟು ಲಂಚ ಕೊಟ್ಟೆ. ಕನ್‌ಸ್ಟ್ರಕ್ಷನ್ ಪ್ರಾರಂಭಿಸಿದೆ... ಅಷ್ಟರಲ್ಲಿ ಮತ್ತೊಂದು ಇಲಾಖೆಯವರು ಬಂದರು. ನೀರಿನ ವ್ಯವಸ್ಥೆ ಹೀಗಿರಬೇಕು... ಬೆಂಕಿ ಅನಾಹುತವಾದರೆ ಕಷ್ಟ.. ಫೈರ್ ಎಕ್ಸ್‌ಟಿಂಗ್ವಿಷರ್ ಹಾಕಬೇಕು ಅಂದರು. ಅದಕ್ಕೆ ಬೇಕಾದ ಉಪಕರಣ ತಂದೆ... ಇಷ್ಟೆಲ್ಲಾ ಮಾಡಿ ಕಟ್ಟಡದ ನಿರ್ಮಾಣ ಮುಂದುವರಿದಿದ್ದಾಗ ಒಬ್ಬ ನಾಗರಿಕ ''ಈ ಸ್ಥಳ ರೆಸಿಡೆನ್ಶಿಯಲ್ ಏರಿಯಾ ಅಂತ ಹೇಳಿ ಕೋರ್ಟ್‌ಗೆ ಹೋಗಿ ಇಂಜಂಕ್ಷನ್ ಆರ್ಡರ್ ತಂದ ಕೆಲಸ ನಿಂತಿತು...'' ಅಂತ ಹೇಳುತ್ತಿರುವಾಗಲೇ ದೇವರಿಗೆ ಸಹನೆ ಮೀರಿತು... ''ಅಯ್ಯೋ, ನೀನು ಏನೇನು ಮಾಡ್ದೆ ಅದು ನನಗೆ ಬೇಡ... ದೇವರ ರಾಜ್ಯದಲ್ಲಿ ಇದೆಲ್ಲಾ ಇಲ್ಲ... ಬೇಗ ಹೇಳು... ಯಾವಾಗ ಮಂದಿರ ಮುಗಿಸ್ತೀಯಾ?''

ಭಕ್ತನೆಂದ: ದೇವರೇ, ''ಇಂಜಂಕ್ಷನ್ ಆರ್ಡರ್ ಇದೆ. ಅದನ್ನು ತೆರವು ಮಾಡಬೇಕು... ಬೇರೆ ಯಾವುದಾದರೂ ಬಿಲ್ಡಿಂಗ್ ಲೀಸ್ ಮೇಲೆ ತೊಗೊಂಡು ಅಲ್ಲಿ ಮಂದಿರ ಸ್ಥಾಪನೆ ಮಾಡ್ತೀನಿ...''

ದೇವರು ಹೇಳಿದ: ''ಅಯ್ಯಾ ಎಲ್ಲಾ ನಿಲ್ಲಿಸಿ ಬಿಡು... ನನಗೆ ಸಾಕಾಗಿ ಹೋಯಿತು... ನಾನು ಎಲ್ಲಿದ್ದೇನೋ ಅಲ್ಲೇ ಇರುತ್ತೇನೆ...''

ಭಕ್ತ: ''ದೇವರೆ ಸಿಟ್ಟಾಗಬೇಡಿ, ನನಗೆ ಶಾಪಕೊಟ್ಟು ಸುಟ್ಟು ಬಿಡಬೇಡಿ''

ದೇವರು: ನಾನೇಕೆ ಹಾಗೆ ಮಾಡಲಿ. ನಿಮ್ಮ ಸರ್ಕಾರ ವ್ಯವಸ್ಥೆ ಅದನ್ನೆಲ್ಲಾ ಮಾಡ್ತಾ ಇದೆಯಲ್ಲಾ? ಬರ್ತೀನಿ..

ಟಾಟಾ... ದೇವರು ನಿನಗೆ ಒಳ್ಳೇದು ಮಾಡ್ಲಿ....

●

## ಇಂಗು

ಸಂಸಾರದಲ್ಲಿ ಅಡುಗೆಗೆ
ಇಂಗು ಬೇಕೇ ಬೇಕಂತೆ
ಆದರೆ ಸೋಮುಗೆ
ತಡೆಯಲಾಗುತ್ತಿಲ್ಲ
ಹೆಂಡತಿಯ ಹವ್ಯಾಸದ
ಷಾಪ್ ಇಂಗು
ಸ್ಲೀಪ್ ಇಂಗು

– ಸುಕೇಶಿನಿ

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**– ದಂನಳಿ**

- ಆಮ್ ಆದಿ ಪಕ್ಷದ ಬದಲು ಭಾಜಪದವರೇ ಪೊರಕೆ ಚಿಹ್ನೆ ಹೊಂದಿದ್ದರೆ ಚೆನ್ನಾಗಿತ್ತು ಎಂದು ಇದೀಗ ಅನ್ನಿಸುತ್ತಿದೆ. ಏಕೆಂದರೆ ಅವರಿಗಿಂತ ಇವರೇ ಅವರನ್ನೂ ಸೇರಿಸಿಕೊಂಡು ಎಲ್ಲರನ್ನೂ ಚೆನ್ನಾಗಿ ಗುಡಿಸಿಹಾಕಿದ್ದಾರಲ್ಲಾ ಅದಕ್ಕೆ...!
- ಸೋಲುವವರಿದ್ದರೆ ತಾನೆ ಗೆಲುವು?
- ನಿಮ್ಮ ಬೆನ್ನು ಬಾಗಿದರೆ ಮಾತ್ರ ನಿಮ್ಮ ಮೇಲೆ ಸವಾರಿ ಮಾಡಲು ಸಾಧ್ಯ.
- ಜೀವ ಕೊನೆಗೊಳ್ಳುತ್ತದೆ ಕಾಲ ಕೊನೆಗೊಳ್ಳುವುದಿಲ್ಲ.
- ಬದುಕು ಒಂದು ಕೈಪಿಡಿಯೊಂದಿಗೆ ಬರುವುದಿಲ್ಲ. ಅದನ್ನು ನಾವೇ ತಯಾರಿಸಿಕೊಳ್ಳಬೇಕು.
- ಯು ಕೆನ್ ಬಿ ಎ ಜಾಕ್ ಆಫ್ ಆಲ್ ಟ್ರೇಡ್ಸ್ ಟಿಲ್ ಯು ಮಾಸ್ಟರ್ ಒನ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಯಮನೊಂದಿಗೆ ಚತುರ ವಾದ ಮಂಡಿಸಿ ಸಾವಿತ್ರಿ ಗಂಡನ ಸಾವನ್ನು ಗೆದ್ದಳು ಎನ್ನುತ್ತೇವೆ. ಆದರೆ ಅವಳು ಗಿಟ್ಟಿಸಿದ್ದು ಆಯುಷ್ಯದ ವಿಸ್ತರಣೆ ಮಾತ್ರ.
- ನಮಗೆ ಸಿಗುವುದು ನಾವು ಬಯಸಿದ್ದಲ್ಲ ನಮಗೆ ದಕ್ಕಬಹುದಾದದ್ದು.
- ವಿಶ್ವದ ಪ್ರಥಮ ಕಾರ್ಡ್‌ಲೆಸ್ ಫೋನ್ ಕಂಡುಹಿಡಿದಿದ್ದು ಭಗವಂತ. ಅದನ್ನು ಅದಕ್ಕೆ ಪ್ರಾರ್ಥನೆ ಎಂದು ಹೆಸರಿಸಿದ. ಅದು ಯಾವಾಗಲೂ ಸಿಗ್ನಲ್ ಕಳೆದುಕೊಳ್ಳದು. ರಿಚಾರ್ಜ್ ಮಾಡಬೇಕಾಗಿಲ್ಲ. ಜತೆಗೆ ಅದನ್ನು ಎಲ್ಲಿ ಬೇಕಾದರೂ ಬಳಸಬಹುದು.
- ಒಳ್ಳೆ ಶಿಕ್ಷಕರು ದುಬಾರಿ. ಆದರೆ ಕೆಟ್ಟ ಶಿಕ್ಷಕರು ಮತ್ತಷ್ಟು ದುಬಾರಿ.
- **ಮೆಕ್ ಡೊನಾಲ್ಡ್ ಸೂತ್ರ:** ಜನಗಳಿಗೆ ಒಂದು ವಸ್ತು ಮಾರಾಟ ಮಾಡೋದಿಕ್ಕೆ ಆಗದಿದ್ದರೆ ಜನಗಳನ್ನೇ ಆ ವಸ್ತುವಿಗೆ ಮಾರಾಟ ಮಾಡಬೇಕು.
- ನಾಳೆ ಒಂದು ಒಳ್ಳೆಯ ದಿನ. ಏಕೆಂದರೆ ಇನ್ನೂ ಏನೂ ತಪ್ಪುಗಳಾಗಿಲ್ಲ ಎಂದು ಭಾವಿಸುವುದು ಒಂದು ಒಳ್ಳೆಯ ಲಕ್ಷಣ ಅಲ್ಲವೆ?
- ಇಫ್ ಯು ಡೋಂಟ್ ಬಿಲೀವ್ ಯು ಆರ್ ವರ್ದಿ ನೊ ಒನ್ ಎಲ್ಸ್ ವಿಲ್.
- ಬಾತು ಕೋಳಿಗಳ ಬಗ್ಗೆ ಸಾಕ್ಷ್ಯ ಚಿತ್ರ ತಯಾರಿಸಿದರೆ ಅದನ್ನು ಡಕ್‌ಮೆಂಟರಿ ಎಂದು ಕರೆಯಬಹುದೆ?

# ಸಂಸಾರದ ಲೆಕ್ಕಾಚಾರ

(ಕಿರು ಪ್ರಹಸನ)

**- ಬೇಲೂರು ರಾಮಮೂರ್ತಿ**

**ಪ್ರಹಸನ 1**

ಸುಂದ್ರು ಬಹಳ ಲೆಕ್ಕಾಚಾರ ಹಾಕ್ತಿರೋನ ಹಾಗೆ ಅಭಿನಯಿಸ್ತಿದಾನೆ. ಇನ್ನೊಂದು ಕಡೆಯಿಂದ ಬಹಳ ದುಃಖದಲ್ಲಿದ್ದ ರಾಜು ಬರ್ತಾನೆ. ಸುಂದ್ರು ಅವನನ್ನೇ ವಿಚಿತ್ರವಾಗಿ ನೋಡ್ತಾನೆ.

ಸುಂದ್ರು : ಯಾಕೋ ಹೀಗಿದೀಯ - ಮುಂಡೇದು ಸುಟ್ಟ ಬದನೇಕಾಯಿ ಅಪರಾವತಾರ.

ರಾಜು : ಒಂದ್ ಮಾತು ಹೇಳ್ತೀನಿ, ಈ ಪ್ರಪಂಚದಲ್ಲಿ ಗಂಡಸ್ರಾಗಿ ಹುಟ್ಲೇಬಾರ್ದು.

ಸುಂದ್ರು : ಹುಟ್ಟಾಯ್ತಲ್ಲ, ಮುಂದಕ್ಕೆ ಹೇಳು.

ರಾಜು : ಅಲ್ಲ, ಮದುವೆ ಮಾಡ್ಕೊತೀನಿ ಅಂದ್ರೆ ಅದಕ್ಕೆ ನೂರೆಂಟು ವಿಘ್ನ ಮಾಡ್ತಾರೆ.

ಸುಂದ್ರು : ಓ ಇದಾ ಸಮಾಚಾರ, ನಿಂದು ಲವ್ ಮ್ಯಾರೇಜಾ.

ರಾಜು : ಹೌದು, ನಾನೂ ಸುನಂದಾನೂ ತುಂಬಾ ಇಷ್ಟಪಡ್ತಿದೀವಿ, ಬೇಗ ಮದುವೆ ಮಾಡ್ಕೊಬೇಕು ಅಂತಾನೂ ಅಂದ್ಕೊಂಡಿದೀವಿ ಅದಕ್ಕೆ ನಮ್ಮನೆಯವರೂ ಒಪ್ತಿಲ್ಲ, ಅವಳ ಮನೆಯವರೂ ಒಪ್ತಿಲ್ಲ.

ಸುಂದ್ರು : ಹಾಗಾದ್ರೆ ಓಡಿ ಹೋಗಿ ಮದುವೆ ಆಗಿಬಿಡು ಆಗ ಯಾರೂ ಏನೂ ಮಾಡೋಕಾಗಲ್ಲ.

ರಾಜು : ಹಾಗೆಲ್ಲ ಆಗೋಲ್ಲಯ್ಯ, ಮನೆಯವರನ್ನೆಲ್ಲ ಒಪ್ಪಿಸಿಯೇ ಮದುವೆ ಆಗೋಣ ಅಂತ ಇಬ್ರೂ ಅಂದ್ಕೊಂಡಿದೀವಿ, ದರಿದ್ರದವರು ಎಲ್ರೂ ಅಡ್ಡ ಬರ್ತಿದಾರೆ

ಸುಂದ್ರು : ಅಲ್ಲಯ್ಯ, ನೀವಿಬ್ರೂ ಪ್ರೀತಿಸ್ತಿರೋ ವಿಚಾರ ಗೊತ್ತಿದ್ದೂ ನಿಮ್ಮ ಮದುವೆಗೆ ಅಡ್ಡ ಬರ್ತಿದಾರೆ ಅಂದ್ರೆ ಅದು ಶುದ್ಧ ತಪ್ಪು.

ರಾಜು : ಹೇಳಿದೀವಯ್ಯ ಆದ್ರೂ ನಾವಿಬ್ರೂ ಸುಖವಾಗಿರೋದು, ಅವರಿಗೆ ಬೇಕಿಲ್ಲ. ಶನಿಗಳ ಹಾಗೆ ಕಾಡ್ತಾರೆ.

ಸುಂದ್ರು : ಏನೋ ನಿನ್ನದು ಜಾತಿ ಸಮಸ್ಯೆನಾ. ಇಬ್ಬರೂ ಬೇರೆ ಬೇರೆ ಜಾತಿನಾ.

ರಾಜು : ಇಲ್ಲಯ್ಯ ಅವಳೂ ನಮ್ಮವಳೇ, ನಾನೂ ಅವರವನೇ.

ಸುಂದ್ರು : ಮತ್ತಿನ್ನೇನಯ್ಯ, ನಿನ್ನ ಮದುವೆಗೆ ಅಡ್ಡಬರ್ತಿದಾರೆ ಅಂದ್ಯಲ್ಲ ಅವರು ಯಾರು ನಿಮ್ಮಪ್ಪ ಅಮ್ಮನಾ ಅಥವಾ ಅವರಪ್ಪ ಅಮ್ಮನಾ.

ರಾಜು : ಅವರ್‍ಯಾರೂ ಅಲ್ಲಯ್ಯ.

ಸುಂದ್ರು : ಅವರ ಕಡೆ ನೆಂಟರಿರಬೇಕು. ಕೆಲವು ನೆಂಟರಿಗೆ ಮಾಡೋಕೆ ಏನೂ ಕೆಲಸ ಇರಲ್ಲ.

ರಾಜು : ಇಲ್ಲಪ್ಪ ನೆಂಟ್ರು ಇಷ್ಟು ಯಾರೂ ಅಲ್ಲಯ್ಯ.

ಸುಂದ್ರು : ಮತ್ತಿನ್ಯಾರಯ್ಯ.

ರಾಜು : ಈ ಮದುವೆಗೆ ನನ್ನ ಹೆಂಡ್ತಿನೂ ಒಪ್ಪಿಲ್ಲ, ಸುನಂದಳ ಗಂಡನೂ ಒಪ್ಪಿಲ್ಲ.

★★★

## ಪ್ರಹಸನ 2

ಕೂಸಿಗೆ ಮುನ್ನ

ರಾವ್ ಅವರು ಬೇಗ ಬೇಗ ನಡ್ಕೊಂಡು ಹೋಗ್ತಿರಬೇಕಾದ್ರೆ ಅವರ ಹಿಂದೆ ನಾಗ ಓಡಿಬರ್‍ತಾನೆ.

ನಾಗ : ಸಾರ್, ಸಾರ್, ನೀವು ಪ್ರೆಸಿಡೆನ್ಸಿ ಸ್ಕೂಲ್ ಛೇರ್‌ಮನ್ ರಾವ್ ಅಂದ್ರೆ ನೀವೇನಾ.

ರಾವ್ : ಹೌದು ನಾನೇ, ಯಾಕೆ, ಏನಾಗಬೇಕಿತ್ತು.

ನಾಗ : ನಿಮ್ಮ ಸ್ಕೂಲಲ್ಲಿ ಮಗೂನ ಎಲ್.ಕೆ.ಜಿ.ಗೆ ಸೇರಿಸಬೇಕಾದ್ರೆ ಎಷ್ಟಾಗುತ್ತೆ ಸರ್.

ರಾವ್ : ಮೊದಲು ಒಂದು ಲಕ್ಷ ಡೊನೇಷನ್ ಕೊಡಬೇಕು ಆಮೇಲೆ ತಿಂಗಳಿಗೆ ಹತ್ತು ಸಾವಿರ ರೂಪಾಯಿನಂತೆ ಫೀಸು. ಆದ್ರೆ ಅಷ್ಟೂ ಹಣವನ್ನು ಒಟ್ಟಿಗೇ ಕಟ್ಟಿಬಿಡಬೇಕು.

ನಾಗ : ಅಬ್ಬಾ ಅಷ್ಟೊಂದಾ, ಅಂದ್ರೆ ಎರಡು ಲಕ್ಷ ಇಪ್ಪತ್ತು ಸಾವಿರ ಆಯ್ತಲ್ಲ ಸರ್. ಸ್ವಲ್ಪ ಕಡಿಮೆ ಮಾಡ್ಕೊಳೋಕಾಗುತ್ತಾ ಸಾರ್.

ರಾವ್ : ಹಾಗೆಲ್ಲ ಕಡಿಮೆ ಮಾಡೋಕಾಗಲ್ಲ, ನಮ್ಮಲ್ಲಿ ಎಲ್ರಿಗೂ ಒಂದೇ ರೂಲ್ಸು. ಆದ್ರೂ ನೀವು ಮಗೂನ ಕರ್‍ಕೊಂಡು ಬನ್ನಿ ಆಮೇಲೆ ನೋಡೋಣ.

ನಾಗ : ಅಲ್ಲ ಸಾರ್ ಎಷ್ಟು ಕಡಿಮೆ ಮಾಡ್ತೀನೀಂತ ಹೇಳಿಬಿಟ್ರೆ ನಂಗೆ ದುಡ್ಡು ಅಡ್ಜಸ್ಟ್ ಮಾಡ್ಕೊಳೋಕೆ ಸರಿಹೋಗುತ್ತೆ.

ರಾವ್ : ಮೊದಲು ಮಗು ಕರ್‍ಕೊಂಡು ಬನ್ರೀ, ಅರ್ಜಿ ಫಿಲಪ್ ಮಾಡಿ ಕೊಡಿ.

ನಾಗ : ಆದ್ರೂನೂ ನೀವು ಈಗಲೇ ಹೇಳಿದ್ರೆ ಚೆನ್ನಾಗಿತ್ತು.

ರಾವ್ : ಇದೊಳ್ಳೆ ಕಥೆ ಆಯ್ತಲ್ಲ, ಅಲ್ರೀ ಹೀಗೆ ಬೀದೀಲಿ ನಿಂತ್ಕೊಂಡು ಅದನ್ನೆಲ್ಲ ಚರ್ಚೆ ಮಾಡೋಕೆ ಆಗುತ್ತೇನ್ರೀ. ಮಗೂನ ಕರ್‍ಕೊಂಡು ಸ್ಕೂಲಿಗೆ ಬಂದು ನನ್ನನ್ನು ನೋಡಿ.

ನಾಗ : ಬರ್ತೀನಿ ಸರ್. ನೀವು ಹೇಳಿದ ಹಾಗೇ ಮಗೂನ ಕರ್ಕೊಂಡು ಬರ್ತೀನಿ. ಆದ್ರೆ ಈಗ್ಲೇ ಕರ್ಕೊಂಡು ಬರೋಕೆ ಆಗಲ್ಲ. ಅದಿಕ್ಕೆ ಫೀಸ್ ವಿಚಾರ ನೀವು ಇಲ್ಲೇ ಹೇಳಿದ್ರೆ ಒಳ್ಳೇದು.

ರಾವ್ : ಒಳ್ಳೆ ಗ್ರಹಚಾರ ಆಯ್ತಲ್ಲ. ಈಗ ಸೀಟ್ ಬೇಕಾಗಿರೋದು ಯಾರಿಗೆ ನಿಮ್ಮ ಮಗೂಗೆ ತಾನೇ.

ನಾಗ : ಖಂಡಿತಾ ನನ್ನ ಮಗೂಗೇ ಸಾರ್.

ರಾವ್ : ಸರಿ ಮತ್ತೆ ಮಗು ಕರ್ಕೊಂಡು ಬನ್ರೀ.

ನಾಗ : ಆದರೆ ಸರ್, ಆದರೆ

ರಾವ್ : ಆದರೆ ಆದರೆ ಅಂತ ನನ್ನ ಟೈಮ್ ಯಾಕ್ರೀ ವೇಸ್ಟ್ ಮಾಡ್ತೀರಿ ಅದೇನು ಹೇಳ್ರೀ.

ನಾಗ : ಸರ್, ಅದು ನನಗೆ ಇನ್ನೂ ಮಗು ಆಗಿಲ್ಲ ಸರ್.

ರಾವ್ : ಎಂಥದ್ರೀ ದರಿದ್ರ, ಕೂಸು ಹುಟ್ಟೋಕೆ ಮುಂಚೆ ಕುಲಾವಿ ಹೊಲಿಸಿದ್ರು ಅನ್ನೋ ಹಾಗೆ ಇನ್ನೂ ಮಗೂನೇ ಆಗಿಲ್ಲ ಆಗ್ಲೆ ನಿಮ್ಮ ಮಗೂಗೆ ನಾನು ಸೀಟು ಕೊಡಬೇಕು ಮತ್ತೆ ಕೊಡೋ ಸೀಟಿಗೆ ನಾನು ಫೀಸು ಎಷ್ಟು ಕಡಿಮೆ ಮಾಡ್ಕೊತೀನಿ ಅಂತ ಹೇಳ್ಬೇಕಾ. ಹೋಗ್ರೀ ಹೋಗ್ರೀ.....

ನಾಗ : ಅಯ್ಯೋ ಹಾಗೆಲ್ಲ ಅನ್ಬೇಡೀ ಸರ್, ಏನೇ ಆದ್ರೂ ಕಮಿಟ್‌ಮೆಂಟ್ ಕಮಿಟ್‌ಮೆಂಟೇ ಅಲ್ವಾ ಸಾರ್, ಎಲ್ಲಾ ಮೊದಲೇ ತಿಳ್ಕೊಂಡ್ ಬಿಡೋಣ ಅಂತ.

ರಾವ್ : ಬಡ್ಕೊಂಡ್ರು ನಿಮ್ಮ ಕಮಿಟ್‌ಮೆಂಟಿಗೆ. ಮೊದ್ಲು ಮಗು ಕರ್ಕೊಂಡು ಬನ್ರೀ.

ನಾಗ : ಬರ್ತೀನಿ ಸಾರ್ ನನ್ನ ಮಗು ಕರ್ಕೊಂಡು ನಿಮ್ಮ ಸ್ಕೂಲಿಗೇ ಬರ್ತೀನಿ ನಿಮ್ಮನ್ನೇ ಕಾಣ್ತೀನಿ. ಆಗ ನೀವು ನನ್ನ ಮಗೂಗೆ ಸೀಟು ಇಲ್ಲ ಅನ್ಬಾರ್ದು.

ರಾವ್ : ಆಯ್ತು. ಇನ್ನೂ ಒಂದೆರಡು ವರ್ಷದ ಮೇಲಿನ ಮಾತು. ಅದ್ಸರಿ, ಯಾಕೆ ಇನ್ನೂ ಮಗು ಆಗಿಲ್ಲ, ಮದುವೆಯಾಗಿ ಎಷ್ಟು ವರ್ಷ ಆಯ್ತು.

ನಾಗ : ಮದುವೆಯಾದ ಮೇಲೆ, ಮಕ್ಕಳಾದ ಮೇಲೆ ಏನೇನು ಕಮಿಟ್‌ಮೆಂಟ್ ಇರುತ್ತೆ ಅಂತ ಮೊದಲೇ ತಿಳ್ಕೊತಾ ಇದೀನಿ ಅದಿಕ್ಕೇ.

ರಾವ್ : ಅದಿಕ್ಕೆ!!!!

ನಾಗ : ನನಗಿನ್ನೂ ಮದುವೆ ಆಗಿಲ್ಲ. ಮುಂದಿನ ವರ್ಷ ಮದುವೆ ಮಾಡ್ಬೇಕು ಅಂತ ಮನೇಲಿ ಮಾತಾಡ್ಕೊತಾ ಇದಾರೆ.

ರಾವ್ : (ಸಿಟ್ಟಿನಿಂದ) ಬಡ್ಕೊಂಡ್ರು ಜಾಗ ಬಿಡ್ರೀ ಒಳ್ಳೆ ಹುಚ್ಚರ ಸಹವಾಸ ಆಯ್ತು.

●

# ಯಾವ ಬಸ್ಸೋ, ಯಾವ ರೈಲೋ ಕಾಪಾಡೋ ಶಿವ!

**- ಎಚ್.ಆರ್. ಹನುಮಂತ ರಾವ್**

"**ಸಾ**ರೂ, ಸಾರೂ, ಮೇಟ್ರೇ.."

"ಯಾರೂ? ಯಾರಪ್ಪ?"

"ನಾನೆಯ, ಪರ್ಮೇಶಿ, ನಿಂ ಸಿಸ್ಯ, ಸಾರೂ"

"ಬಾ, ಒಳಕ್ಬಾ, ಏನ್ಲೇ ಪರ್ಮು, ಬೆಳಗ್ಗ ಬೆಳಗ್ಗೇನೇ ನಿನ್ನ ದರ್ಶನ, ನಾ ಏನ್ ತಪ್ ಮಾಡಿವ್ನಿ? ಆ ಶಿವ ನನ್ಮ್ಯಾಕೆ ಏಕೋ ಮುನ್ಸಕೊಂಡಂಗ್ ಕಾಣ್ತೈತೆ"

"ಛೆ, ಎಲ್ಲಾದರು ಉಂಟಾ ಮೇಟ್ರೇ, ತಪ್ಪಾಯ್ತು ಅಂತ ಕೆನ್ನೆಗೆ ನಾ ಹೊಡ್ಕಂಡೇನು, ಆ ಪರ್ಮಶಿವ್ಗೆ ನಿಂಮ್ಮೇಲೆ ಕೋಪ ಅಂದ್ರೆ"

"ಆ ಶಿವ ಇರ್ಲಿ ಅತ್ಲಾಗೆ ಪಾರ್ವತಮ್ಮನ ಜೊತ್ಯಾಗೆ, ಈ ನನ್ನೆದ್ರುಗಿನ ಪರ್ಮಶಿವ್ನ ಕಾಟ ಈಟೋತ್ನಾಗೆ ಏನಿದ್ದೀತು ಅಂತ? ಏನ್ ಸಮಾಚಾರ?"

"ನಮ್ ಚಂಬಸ್ಯ ಸಾರೂ, ಮೋದಿ ಎಲೆಕ್ಸನ್ ಗುಜ್ರಾತ್ನಾಗೆ ಹೆಂಗೈತೋ ನೋಡೋವಾ ಅಂತಾ ಹೋಗಿದ್ದವ ವಾಪಸ್ಸು ಎರ್ನ್ನಕುಲಂ ಸೇರಿ, ಅಲ್ಲಿಂದ ಬೆಂಗ್ಳೂರಿಗೆ ಬರೋವ. ಈಗ ಅವ್ನ ರೈಲು ಗುಲ್ಬರ್ಗ ಟೇಷನ್ಗೆ ಹೊಂಟೋಗ್ತೈಯ್ತಂತೆ. ರಾತ್ರಿ ನಿದ್ದೆಯಿಂದ ಕಣ್ಬಿಟ್ಟಾಗ ಅವಾ ಫೋನ್ ಮಾಡಿದ್ದ.

"ಹಾಗಂದ್ರೇನ್ಲೆ? ಹೈಜಾಕ? ಬಳ್ಳಾರಿಗೆ ಹೋಗೋ ಟ್ರೈನ್ ಹತ್ತಿ ಕುಂತಾವ ಹಾಸನ ಸ್ಟೇಷನ್ ನಾಗೆ ಕಂಡಂಗಾತು."

"ಅಲ್ಲಲೇ! ನಮ್ ದೇಶದಾಗೆ ರೈಲ್ ಬಿಡೋವ್ರು ಬರೀ ರಾಜಕಾರಣಿಗಳು ಅಂತಿದ್ದೆ. ಇದೀಗ ನೀನೂ, ನಿನ್ನ ಓತೀಕ್ಯಾತ ಫ್ರೆಂಡು ಚೆನ್ನಬಸ್ವಾನೂ ಇನ್ನೂ ಚೆನ್ನಾಗೇ ಬಿಡ್ತೀರ್ಲೆ. ಭಲೇ, ಬೊಗ್ಳೆ ಬಿಡ್ಲಿಕ್ಕೆ ಈಗಿನ್ ಮುಹೂರ್ತಾನೇ ಬೇಕೇನ್ಲೆ?"

"ನಿಜ ಸಾರೂ, ಆ ದೇವ್ರಾಣೆಗೂ. ಎಲ್ಲಾ ಪೇಪರ್ನಾಗೂ ಬಂದೈತೆ ಈ ಸಮಾಸಾರ"

"ಹಂಗಂತೀಯ? ಖರ್ಗೆ ಡಿಪಾರ್ಟ್ಮೆಂಟು ಹಳಿ ತಪ್ಪಿ ಹೋಗ್ತೈಯ್ತಾ? ಯಾಕಂತೆ."

"ಮತ್ತೆ, ಮಧ್ಯ ದಾರೀಲಿ ಹಳಿ ರಿಪೇರಿ ಮಾಡೋವಾಗ ಸಿಗ್ನಲ್ ಬದಲಾಯ್ಸದೆ."

"ನಿನ್ನೆ ಮೊನ್ನೆ ವಿಸ್ಯ ಸಾರ್, ಸಿಟಿ ಬಸ್ಸೊಂದು ಕೆಂಪೇಗೌಡ್ರ ವೃತ್ತ ಬಿಟ್ಟು ಸರಕ್ನೆ ಯಾರ್ಗೂ ಹೇಳ್ದೆ ಕೇಳ್ದೆ ಬನಶಂಕರೀಗೆ ಹೊಂಟೋಗಿರಲಿಲ್ವ?"

"ಅದೇನ್ ಬುದ್ದೀನೋ ಈ ಬಸ್ಸುಗಳ್ಗೂ, ಇದ್ದಕ್ಕಿದ್ದಾಗ್ಗೇನೆ ಜಟ್ಕಾ ಕುದ್ರೆಗಳ್ತರಾನೇ ರಾಂಗ್ ಆಗ್ಬುಟ್ಟು, ಒಕ್ಕೆಲ್ಬಿಬ್ಸ್ತಾವೆ. ಪಾಪ, ಡ್ರೈವರ್ಗೋಳು ಏನ್ ಮಾಡ್ತಾರೆ? ಅವರಿಗೂ ಕಾಫಿ, ಬೀಡಿ

ಅದೂ ಇದೂ ಬೇಡ್ವಾ?'' ಅದೇನ್ ಬಿಡಲೇ, ಮಿನಿಸ್ಟರ್ಗೋಳ್ ಸಭೆಗೆ ಬರ್ತಾ ಅವ್ರೆ ಅಂತಾ ಕಾಯ್ತಿದ್ರೆ, ಎಲ್ಲೋ ಯಾವ್ ಸರ್ಕೀಟ್ ಹೌಸ್ನಲ್ಲೋ ಚಕ್ಕಂದ ಆಡ್ಕೊಂಡ್ ಇರೋ ವಿಷ್ಯ ಗೊತ್ತಿದ್ರೂ ನಾವ್ ಬಾಯ್ ಮುಚ್ಕಂಡಿರಲ್ವ? ನಿಂಗ್ಯಾಕಿದ್ದೀತು ಬೆಳಗ್ಗೆ ಈ ಉಸಾಬರಿ ಬೇರೆ ಕೆಲಸ ನೋಡ್ಕಳಾದ್ಬಿಟ್ಟು, ನಿಮ್ಮೂರ್ನಾಗೆ ಶೇಂಗಾ, ಹತ್ತಿ, ಧನಿಯ ರೇಟ್ ಏನಾಗೈಯ್ತೆ ನೋಡ್ಕೊ. ಟುಟಿಕಾರಿನ್ನು, ಬೆಜ್ವಾಡ, ಕೊಲೊಂಬೊ ಕಡೆ ಲಾರಿ ಲೋಡ್ ಕಳ್ಸೋವಾ ನಿಮ್ಮಪ್ಪ, ನೀನಲ್ವೇನ್ಲೆ?''

''ಅದೆಲ್ಲ ನನ್ನಸಿಸ್ಟೆಂಟು ದುರ್ಗಿಗುಡಿ ರಾಯ ನೋಡ್ಕೊಂತವ್ನೆ. ಆದ್ರೆ, ಸಾರೂ, ನನ್ ಹೆಂಡ್ರು ವಿಶಾಖಪಟ್ಣದಿಂದ ಇವತ್ ನಾಳೆ ಮಗಿನ್ ಜೊತೆ ಹೊಂಟ್ ಬರೋ ಆಕಿ, ಅಲ್ಲಿ ರೈಲ್ನಾಗೆ ಕುಂತ್ರೆ, ಇಲ್ಲಿ ನಾ ಸಂಜೆ ಸ್ಟೇಷನ್ನಾಗೆ ಅವಳ್ನ ಕಾಣ್ದಿದ್ರೆ ಏನ್ ಗತಿ ಅಂತಾ ಯೊಸ್ನೆ ಆಗ್ಬುಟ್ಟದೆ.''

''ಅಂಗಾ, ನೀ ಹುಷಾರಾಗಿರ್ಬೇಕ್ಲೆ, ಒಂದೊಂದ್ ಸ್ಟೇಷನ್ನಾಗೂ ಫೋನ್ ಮಾಡಿ ವಿಚಾರಿಸ್ಕೊತಾ ಇರು. ನಂ ಕಾಲ್ದಾಗೆ ಜನ ಒಂದ್ ಟ್ರೈನಿಂದ ಮತ್ತೊಂದಕ್ಕೆ ಜಂಪ್ ಮಾಡೋದ್ನ ನೋಡಿದ್ದೆ. ಆದ್ರೆ, ಈಗಿನ್ ತರಾ ಟ್ರೈನೇ ಒಂದ್ ಹಳೀಂದ ಮತ್ತೊಂದಕ್ಕೆ ಜಂಪ್ ಮಾಡಿದ್ದೂ ಅಲ್ದೆ, ಬೇರೆ ಊರ್ಗೇನೆ ಜನಾನ ಹೈಜಾಕ್ ಮಾಡೋದ. ವಿಜ್ಞಾನ ಎಷ್ಟ್ ಮುಂದ್ವರ್ದಿದೆ ಅನ್ನೋದನ್ನ ತೋರಿಸ್ತದೆ! ಈ ಉಸಾಬರಿನೇ ಬೇಡಾ, ನೀ ಅಲ್ಲಿಂದ ಫ್ಲೈಟ್ ಇದ್ರೆ, ಅದ್ರಲ್ಲಿ ಕರ್ಸಿಬಿಡು.''

''ಅಂಗೇ ಅನ್ಕಂಡಿದ್ದೆ, ನಿಮ್ಮನ್ನ ಒಂದ್ಸಾರಿ ಕೇಳ್ಬಿಟ್ ಮಾಡೋವ ಅಂತ ಇಲ್ಲೀ ತನಕ ಬಂದೆ. ಆದ್ರೆ ಸಾರು, ನಮ್ ರೈಲ್ ಮಂತ್ರಿ ಗೋಳ್ ಇರ್ಲಿ, ಯಾವ್ ದೊಡ್ ದೊಡ್ ರಾಜಕಾರಣಿಗಳು ಕೂಡ ಈ ಬಗ್ಗೆ ತಲೆ ಕೆಡ್ಸಿಕೊಳ್ಳಲ್ಲ.'' ಪಾಪ ಅವ್ರೇನ್ ಮಾಡ್ಲಿಕ್ಕೆ ಸಾಧ್ಯ? ಅದೂ ಅಲ್ದೆ ಅವರೆಲ್ಲಾ ಫ್ಲೈಟ್ನಾಗೇ ಓಡಾಡೋದು, ರೈಲ್ ವಿಷ್ಯ ಏನಿದ್ರೂ ನಮ್ಮಂತೋರತ್ರ ರೈಲ್ ಬಿಡಾಕ್ ಅಷ್ಟೇಯಾ. ಈ ಎಲೆಕ್ಷನ್ ಬಂದು ಏನೇನೋ ಆಗ್ತಿದೆ, ಅಲ್ದೆ ಎಲೆಕ್ಷನ್ ಟೈಂನಾಗೆ ಎಲ್ಲಾರೂ ರೈಲು ಬಿಡೋದು ಸಾಮಾನ್ಯ. ರೈಲು ಮಿನಿಸ್ಟರು ಬಜೆಟ್ನಾಗೆ ಉದ್ದಕ್ಕೂ ರೈಲು ಬಿಟ್ಟಿದ್ದೇ ಬಿಟ್ಟಿದ್ದು. ಈ ಯಾವ ರೈಲು ಎಲ್ಲೂ ಕಾಣ್ಸೋದಿಲ್ಲ. ನಮ್ಮ ಮೆಟ್ರೋ ಅಂತೂ ಏಳೆಂಟು ವರ್ಷಗಳಿಂದ ಅದೇಷ್ಟು ಬಾರಿ ರೈಲು ಬಿಟ್ಟಿದ್ದೇ ಬಿಟ್ಟಿದ್ದು. ಜನಗೋಳು ಬರೀ ಮೆಟ್ರೋ ಧೂಳು ಕುಡಿದಿದ್ದೇ ಕುಡಿದಿದ್ದು. ಅತ್ಲಾಗೆ ಮುಖ್ಯ ಮಂತ್ರಿ ಗೋಳು ಕೂಡಾ ಅನಾವರಣ ಮಾಡಿದ್ದೂ ಆಗೋಯ್ತು. ಸರಿಯಾಗಿ ಒಂದು ಸ್ಟೇಷನ್ನೂ ರೆಡಿ ಇಲ್ಲ, ಇನ್ನು ದಕ್ಷಿಣ ಉತ್ತರದ್ದು ಮೆಟ್ರೋ ಗೋವಿಂದೋ ಗೋವಿಂದ. ಚುನಾವಣೇಲಿ ಪ್ರತಿಪಕ್ಷದೋರ್ನ ಬೈಯ್ತಾರೆ, ಏನೇನೋ ಮಾಡ್ತೀವಿ ಅಂತ ರೈಲು ಬಿಡ್ತಾನೇ ಇರ್ತಾರೆ.''

''ಸಾರು, ಸತ್ಯ ಹೇಳಕ್ಕೂ, ಸುಮ್ನೆ ಇರ್ಲಿಕ್ಕೂ ಏನ್ ಯತ್ವಾಸ? ಯಾರ್ಗೆ ಬೇಕು ಈ ಬೊಗಳೆ ಮಾತುಗಳು, ಪ್ರೈಮರಿ ಕ್ಲಾಸ್ನಲ್ಲಿ ಗಾಂಧಿ ಬಗ್ಗೆ ಏನೆಲ್ಲಾ ಹೇಳಿದ್ದಾರೆ, ಮಹಾತ್ಮಪ್ಪ ಇದೇನಾ ಈ ರಾಜ್ಕಾರ್ಣಿಗಳ್ಗೆ ಹೇಳ್ಕೊಟ್ಟಿದ್ದು?''

''ನಿ ಬಹಳೇ ಹುಚ್ಚ ಆದೀಯ, ರಾಜಕೀಯ ನಿಂಗೆ ಏನೇನೂ ತಿಳಿಯೋದಿಲ್ಲ. ಅಲ್ಲಿ ಇದೆ ಅಂದ್ರೆ ಇಲ್ಲ, ಹೌದು ಅಂದ್ರೆ ಮತ್ತೊಂದು. ನನಗೇ ಒಂದು – ಜನಗಳ್ಗೇ ಒಂದು, ವೋಟ್ ನಿಂದು – ನೋಟ್ ನಂದು ಅನ್ನೋದೇ ಇಲ್ಲಿ ಮೂಲ ಮಂತ್ರ. ಜಾತಿ, ಮತ, ಹಣ, ಹೆಂಡಕ್ಕಷ್ಟೇ ಇಲ್ಲಿ ಮರ್ವಾದೆ, ಗೊತ್ತಾತ್ ಏನ್ಲೇ?''

''ಅದೆಂಗಾಯ್ತದೆ ಸಾರು, ನ್ಯಾಯ, ಸತ್ಯ ಎಲ್ಲಾರ್ರಿಗೂ ಒಂದೇ ಅಲ್ಲವ್ರ?''

''ನೀ ಭಾಳ ಭೋಳೆ ಇದಿ, ಕೇಳೂ ಜನಮೇಜಯ, ಒಬ್ಬ ಮಾಜಿ ಪ್ರಧಾನಿ 'ನಾ ರಿಟೈರ್ ಆಗೋವ್ನಿ ಮುಂದಿನ ಎಲೆಕ್ಷನಾಗೆ' ಅಂತಾ ಹೇಳ್ಕೊಂಡ್ ನಿಲ್ತಾನೆ ಅವ್ರೆ. ಅದೆಷ್ಟನೇ ಬಾರೀನೋ 'ಇದೇ ಕಡೇದ ಅಂತಾ' ಸ್ವಾತಂತ್ರ್ಯ ಬಂದಾಗಿಂದ್ಲೂ ಒಂದು ಪಕ್ಷ 'ನಾವು ಬಡವರ ಪಕ್ಷ' ಅಂತಾ ಹೇಳ್ಕೊಂಡ್ ನಮ್ಮ ವೋಟ್ ತಗೊಂಡ್ ಅಧಿಕಾರ ಚಲಾಯ್ಸಿದ್ದೂ ಚಲಾಯ್ಸಿದ್ದೂ. ಒಂದ್ ಕಾಲ್ದಾಗೆ 'ಗರೀಬಿ ಹಟಾವೊ' ಅಂತಾ ಹೇಳ್ಕೊಂಡ್ ವೋಟ್ ತೊಗೊಂಡಿದ್ದೂ ಆಯ್ತು. 'ಬಡವರ ಸೇವೆ ನಂ ಗುರಿ ಅಂತಾ' ಅನ್ನೋದ್ ಮಾತ್ ಮಾತ್ರ ಇವತ್ತೂ ಅವ್ರು ಹೇಳೋದ್ ತಪ್ಪಿಲ್ಲ. ಬಡತನ ಅಂಗೇ ಮಡಿಕಂಡವ್ರೆ ಅವರುಗಳು ಮುಂದಿನ್ ಎಲೆಕ್ಷನ್ಗೆ.''

''ಆದ್ರೆ ಹಾಗೆ ಹೇಳ್ಕೊಂಡ್ ನಮ್ ವೋಟ್ ಹಾಕಿಸ್ಕೊಂಡವ್ರೆಲ್ಲಾ ಕೋಟ್ಯಾಧಿಪತಿಗಳಾಗಿರೋದಂತೂ ನಿಜ ಸಾರು.''

''ಮತ್ತೊಂದ್ ಪಕ್ಷದೋರು ಗರಿಗರಿ ಚಡ್ಡಿ ಹಾಕ್ಕೊಂಡೇ ಸಿಕ್ಕ ಅವ್ಕಾಶದಲ್ಲೇ ರಂಪಾ ಮಾಡಿ ಜೈಲೂ ನೋಡಿದ್ದಾಯ್ತು, ಕಾರ್ಮಿಕರ ಪಕ್ಷದೋರ್ ಬಗ್ಗೆ ಸುಮ್ಕಿರೋದೇ ವಾಸಿ, ಸ್ವರ್ಗ ತೋರ್ಸಿ – ನರಕ ಮಾಡ್ತಾರೆ, ಇನ್ನ ಚಿಲ್ರೆ ಪಾರ್ಟಿಗಳು ಹರಿಯೋ ನೀರ್ನಲ್ಲಿ ಮೀನು ಹಿಡಿಯೋ ಅವಾಂತರದ ಬಗ್ಗೆ ಏನ್ ಹೇಳ್ಲಿ. ಅದೇ ಗೆದ್ದೆತ್ತಿನ ಬಾಲ ಹಿಡಿಯೋದ್ ಕುದುರೆ ವ್ಯಾಪರ್ದವರ ಸಮಾಚಾರ?''

''ಸಾರು ಆಮ್ ಆದ್ಮಿ ಏನೋ ದೇಶಾನೇ ಕ್ಲೀನ್ ಮಾಡ್ಲಿಕ್ ಹೊಂಟವ್ರೆ.''

''ಅವ್ರು ಒಂಥರಾ, ಎರೆಡೆರೆಡು ಟ್ರಾಕ್ನಾಗೆ ರೈಲ್ ಒಟ್ಗೆ ಓಡ್ಸೋವ್ರು, ದಿಲ್ಲೀನ ಒಂದೇ ಸಾರಿಗೆ ಗುಡ್ಸಿ, ಸ್ವಚ್ಛ ಮಾಡಿ, ಹೈಜಾಕ್ ಮಾಡಕ್ ಹೊಂಟು, ಕಂಬಿಯಿಂದ ಜಾರಿ ಇಂಜಿಂನ್ ಒಂದ್ಕಡೆ, ಗಾಡಿ ಒಂದ್ಕಡೆ ಬಿದ್ದ ಸಮಾಚಾರ ನಗೆಪಾಟಲಾಗೋಯ್ತಲ್ವ?''


''ಅಂದ್ರೆ, ಇವ್ರು ಬ್ರಸ್ಟಾಚಾರ ನಿರ್ಮೂಲ ಮಾಡಿ, ಆಡಳಿತದಲ್ಲಿ ಸದಾಚಾರ ತರ್ತಾರೆ ಅಂತ ಅನ್ಸಿದ್ದು ಈಗ ತಪ್ಪಾ, ಇಲ್ಲಾ ಒಪ್ಪಾ ಮೇಟ್ರೆ?''

''ಗೊತ್ತಿಲ್ಲ ಶಿಷ್ಯ, ಆ ದೇವ್ರು ಅನ್ನೋ ರೈಲ್ವೆ ಗಾರ್ಡೆ ಹೇಳ್ಬೇಕ್ ಅಷ್ಟೇಯ. ಈಗ ನಂ ರೈಲು ಮಹಾ ಚುನಾವಣೆ ಅನ್ನೋ ಸ್ಟೇಷನ್ನಾಗೆ ನಿಂತ್ರೈಯ್ತೆ.''

●

# ಕೊರವಂಜಿ ಪದಬಂಧ – 7

- ವಿದ್ಯಾ ವಿ. ಹಾಲಭಾವಿ



**ಎಡದಿಂದ ಬಲಕ್ಕೆ**

1. ವನದೊಳಗೇ ಮುಖವನ್ನು ತೂರಿಸಿದ್ದಾರಲ್ಲಾ (3)
3. ಟಾಂಗಾವಾಲನ ಬಳಿಯಿರುವ ಪ್ರಾಣಿ (3)
5. ಅನುಗ್ರಹವೇ ಇಲ್ಲದೆ (3)
7. ಮನವು ಹೀಗೆ ಕೋತಿ ತರಹ (3)
9. ರಾಗದಲ್ಲಿ ಕೊನೆಗೊಂಡ ಪ್ರೀತಿ (4)
10. ಈ ಶೂರೆ, ಗಣಿಯೊಳಗಿದ್ದಾಳಲ್ಲಾ? (4)
12. ಪರಚಲು ಬೇಕಾದ ನಖ (3)
14. ಈತ ಪೆದ್ದ (3)
16. ಕರದಲ್ಲಿರುವ ಚಿಪ್ಪು (3)
17. ಶುಕದ ಬಳಿ ಬಂದಿರುವ ನಾಯಿ (3)

**ಮೇಲಿಂದ ಕೆಳಕ್ಕೆ**

1. ಇದು ಉಲ್ಟಾಪಲ್ಟಾ ಆಗಿರುವ ಹೆರಿಗೆ (3)
2. ನೀರನ್ನು ತರುತ್ತಿರುವ ಸ್ತ್ರೀ (2)
3. ನ್ಯಾಯವಲ್ಲದ ತರ್ಕ (3)
4. ಮಣಿಹಾರ ಧರಿಸಿರುವ ಚಕ್ರವರ್ತಿನಿ (4)
6. ಸಬೂಬು ಹೇಳಿ ಹಚ್ಚಿಕೊಂಡ ಸೋಪು (3)
7. ಹುಟ್ಟು ಇಲ್ಲಿ ಉಲ್ಟಾ ಆಗಿದೆ (3)
8. ಗುರುಗುಟ್ಟುತ್ತಿರುವ ಗಂಡುಕುರಿ (3)
9. ಅವನ ಸಾವು ಹೀಗೆ ಬಂದಿದೆಯಲ್ಲಾ? (4)
11. ಈತ ವಾದ್ಯ ನುಡಿಸುವವನು (3)
13. ಗೂಟದ ಬಳಿ ನಡೆದ ಜಗಳ (3)
15. ಈ ವ್ಯಾಪಾರಿಯ ಬಳಿ ತರ್ಕವೇಕೆ? (3)
16. ಸುಂದರ ಹೆಣ್ಣಿನ ಮೇಲೆ ಬಿದ್ದ ನಯನ (2)

*(ಉತ್ತರಕ್ಕೆ 30ನೇ ಪುಟ ನೋಡಿ)*

ಹುರುಳಿಕಟ್ಟು

# ವೋಟು ತಪ್ಪುತ್ತೆ ಅನ್ನೋ ಸಮಾಧಾನ

**- ಎಚ್. ಗೋಪಾಲಕೃಷ್ಣ**

**ಮೊ**ನ್ನೆ ಮುಗೀತಲ್ಲಾ ಎಲೆಕ್ಶನ್ನು.. ಆದರ ಸಂದರ್ಭದ ಒಂದು ಕತೆ..

ನಗರ ಸಾರಿಗೆಗಳಲ್ಲಿ ಪ್ರಯಾಣಿಸುವಾಗ ಯಾವಾಗಲೂ ಹಿಂದಿನ ಸೀಟುಗಳನ್ನು ಇಷ್ಟ ಪಡುವವನು ನಾನು. ಸಾಮಾನ್ಯವಾಗಿ ಹಿಂದಿನ ಸೀಟುಗಳು ಖಾಲಿ ಇರುವ ಬಸ್ಸುಗಳನ್ನೇ ನೋಡಿ ಹತ್ತುತ್ತೇನೆ. ಮೊನ್ನೆ ಹೀಗೇ ಹಿಂದಿನ ಸೀಟು ಖಾಲಿ ಅಂತ ಬಸ್ಸು ಹತ್ತಿದೆ. ಹಿಂದಿನ ಸೀಟುಗಳು ತುಂಬಿದ್ದವು. ಕಣ್ಣು ಹಾಯಿಸಿದರೆ ಬಾಗಿಲ ಸನಿಹವೇ ಒಂದು ಸೀಟು ಖಾಲಿ ಇದೆ – ಹಿರಿಯ ನಾಗರಿಕರದ್ದು ಅಂತ ಬೋರ್ಡು ಹಾಕಿಕೊಂಡಿರುವ ಸೀಟು. ಕಿಟಕಿ ಪಕ್ಕ ಒಬ್ಬರು ಯಜಮಾನರು ಸುಮಾರು ಎಪ್ಪತ್ತು ಮೀರಿರುವವರು ಕೂತಿದ್ದಾರೆ. ಅವರ ಪಕ್ಕ ಕೂತೆ. ಯಜಮಾನರು ಯಾವುದೋ ಕರಪತ್ರ ಹಿಡಿದು ಓದುತ್ತಿದ್ದರು. ಸುಮ್ಮನೆ ಕರಪತ್ರದ ಕಡೆಗೆ ಕಣ್ಣು ಹಾಯಿಸಿದೆ. ಬೇರೆಯವರು ಏನು ಓದುತ್ತಾರೆ, ಏನು ಬರೆಯುತ್ತಾರೆ... ಈ ರೀತಿಯ ಚಪಲಗಳು ನನ್ನಲ್ಲಿ ಇಲ್ಲ! ಆದರೂ ಕುತೂಹಲ ನೋಡಿ – ಈ ವಯಸ್ಸಿನ ಹಿರಿಯರು ಅದೇನೋ ಆಸಕ್ತಿಯಿಂದ ಓದುತ್ತಿದ್ದಾರೆ ಅಂದರೆ ಅವರ ಆಸಕ್ತಿಯನ್ನು ಆಕರ್ಷಿಸಿರುವ ವಿಷಯ ಅದೇನು ಈ ಕಾಗದದಲ್ಲಿ ಇದೆ ಎನ್ನುವ ಪತ್ತೇದಾರಿ ಬುದ್ಧಿ ಕಾಗದವನ್ನು ಇಣಿಕಿ ನೋಡುವಂತೆ ಮಾಡಿತು.

ಮುಂದಿನವಾರ ಚುನಾವಣೆ ಇದೆ, ಅದಕ್ಕೆ ಪೂರಕವಾಗಿ ಮತದಾರರಿಗೆ ಬರೆದ ಪತ್ರ ಇದು ಅಂತ ಗೊತ್ತಾಯಿತು. ಹೆಡ್ ಲೈನು ಓದಿ ಅದರಲ್ಲಿ ಆಸಕ್ತಿ ಕಳೆದುಕೊಂಡು ಪಕ್ಕಕ್ಕೆ ತಿರುಗಿದೆ. ಐದಾರು ನಿಮಿಷ ಕಳೆದಿರಬಹುದು. ಯಜಮಾನರು ನನ್ನ ಕೈ ತಟ್ಟಿದರು. ಅವರ ಮೇಲೆ ಭಾರ ಬಿಟ್ಟಿದ್ದೀನೇನೋ ಅಂತ ಪಕ್ಕಕ್ಕೆ ಸರಿದೆ. ಅವರ ಕಡೆ ಗಮನ ಹರಿಸಿರಲಿಲ್ಲ. ಯಜಮಾನರು ಮತ್ತೊಮ್ಮೆ ಕೈ ತಟ್ಟಿ ಸಾರ್ ಅಂದರು.

ಅವರೆಡೆಗೆ ತಿರುಗಿದೆ – ಏನು ಎಂಬಂತೆ ತಲೆಯಾಡಿಸಿದೆ.

ಅವರು ಇಂಗ್ಲೀಷಿನಲ್ಲಿ ಕೇಳಿದರು – ಕನ್ನಡ ಬರುತ್ತಾ?

ನನ್ನ ನೆನಪು ಹಿಂದಕ್ಕೆ ಓಡಿಬಿಡಬೇಕೇ? ನಾನು ಕೆಲಸ ಮಾಡುತ್ತಿದ್ದ ಕಡೆ ಕನ್ನಡವನ್ನು ದಿನನಿತ್ಯದ ಭಾಷೆಯಾಗಿ ಉಪಯೋಗಿಸಲು ಹಮ್ಮಿಕೊಂಡಿದ್ದ ಹಲವಾರು ಹಾದಿಗಳಲ್ಲಿ ನಮ್ಮ ಎಲ್ಲಾ ಅರ್ಜಿಗಳನ್ನೂ ಕನ್ನಡದಲ್ಲಿಯೇ ತುಂಬಿಸಬೇಕು ಅನ್ನುವುದು ಒಂದು ಪುಟ್ಟ ಹಾದಿ. ಅದರಂತೆ ಒಮ್ಮೆ ಹೊರಗೆ ಹೋಗುವ ಕೋರಿಕೆ ಅರ್ಜಿಯನ್ನು ಕನ್ನಡದಲ್ಲಿ ತುಂಬಿಸಿ ಆಚೆ ಹೊರಟಿದ್ದೆ. ನಮ್ಮ ಸಂರಕ್ಷಣಾ ಕಚೇರಿಯಲ್ಲಿ ಕೊಡಗಿನ ಒಬ್ಬ ನಿವೃತ್ತ ಯೋಧ ಈ ಹೊರಹೋಗುವವರನ್ನು ನಿಯಂತ್ರಿಸುವ ಕೆಲಸ ನೋಡಿಕೊಳ್ಳುತ್ತಿದ್ದರು. ನಾನು ಕಾಗದ ಕೊಟ್ಟಕೂಡಲೇ ಅವರಿಗೆ ಅದೇನು ಬರೆದಿದ್ದೀನಿ ಅಂತ ಅರ್ಥವಾಗಲಿಲ್ಲ. ಏನಿದು? ಅಂತ

ಗಡಸು ದನಿಯಲ್ಲಿ ಕೇಳಿದರು – ಸೆಕ್ಯೂರಿಟಿಯವರಿಗೆ ಒಲಿದಿರುವ ದನಿ ಅದು. ಆಚೆ ಹೋಗ್ತಾ ಇದೀನಿ ಅದು ಇದು... ಅಂದೆ.

ಯಾವ ಭಾಷೆ ಇದು? ಕಾಗದ ತೋರಿಸಿ ಅವರು ಕೇಳಿದರು.

ಅದಾ? ಅದು ಕನ್ನಡ ಕಸ್ತೂರಿ ಕನ್ನಡ... ಅಂದೆ. ಆತನನ್ನು ರೇಗಿಸಬೇಕು ಅನ್ನುವ ಉದ್ದೇಶ ನನಗೆ ಇರಲಿಲ್ಲ. ಆತನಿಗೆ ಜರ್ ಅಂತ ಕೋಪ ಉಕ್ಕಿಬಿಡ್ತು.

ಇದು ಕನ್ನಡವಾ? ಕನ್ನಡ ಬರೆಯೋದು ಹೇಗೆ ಅಂತ ಗೊತ್ತಾ?..........

ಐದು ನಿಮಿಷ ಆತ ಹೀಗೆ ದಬಾಯಿಸ್ತಾ ಇದಾನೆ. ನಾನು ಪೆಚ್ಚಾಗಿ ನಿಂತಿದೀನಿ...

ಜೋರು ದನಿ ಕೇಳಿ ರೂಮಿನಿಂದ ಅಧಿಕಾರಿ ಆಚೆ ಬಂದರು. ನನ್ನನ್ನು ನೋಡಿದರು, ಆತನನ್ನ ನೋಡಿದರು ಏನು ಅಂತ ಕಾಗದ ಈಸುಕೊಂಡರು. ಅದರ ಮೇಲೆ ಸಹಿ ಹಾಕಿ ಇವರು ಯಾರು ಅಂತ ಗೊತ್ತಾ? ಕನ್ನಡದಲ್ಲಿ ಪುಸ್ತಕ ಬರೆದಿದ್ದಾರೆ ಇವರು... ಅಂತ ಆತನ ಕಡೆ ತಿರುಗಿದರು.

ಇದು ನನಗೆ ಒಂದು ಮುಜುಗರದ ಸಂಗತಿ ಆಗಿ ಕಾಗದ ಕಸಿದುಕೊಂಡು ಆಚೆ ಓಡಿದ್ದೆ! ನಂತರ ಆತ ನನ್ನ ಗೆಳೆಯನಾಗಿಬಿಟ್ಟ ಮತ್ತು ಕನ್ನಡದಲ್ಲಿ ಸಂಶಯ ಬಂದಾಗಲೆಲ್ಲಾ ನನ್ನ ಬಳಿ ಬರುತ್ತಿದ್ದ! ಅಂಥಾ ನನಗೆ ಇವರು ಕನ್ನಡ ಬರುತ್ತಾ ಅಂತ ಕೇಳ್ತಿದ್ದಾರಲ್ಲಾ!

ಸಲ್ ಸಲ್ಪ ಗೊತ್ತು ಸಾರ್.... ಅಂದೆ.

ಅವರ ಕೈಯಲ್ಲಿದ್ದ ಕಾಗದ ನನಗೆ ಕೊಟ್ಟರು.

ಇದು ಒಂದು ಪಾಂಪ್ಲೆಟ್ಟು ಮಾಡಿಸಿದ್ದೆ. ಇದನ್ನ ಪ್ರಿಂಟಿಗೆ ಕಳಿಸಬೇಕು. ಎಲ್ಲೋ ಏನೋ ಮಿಸ್ಟೇಕು ಇದೆ ಅಂತ ಅನ್ನಿಸ್ತು. ಕನ್ನಡಕ ತಂದಿಲ್ಲ ಅಂಗಡೀಗೆ ಹೋದರೆ ಕಂಪ್ಯೂಟರಿನಲ್ಲಿ ದೊಡ್ಡದಾಗಿ ಮಾಡಿ ತೋರಿಸ್ತಾನೆ, ನೀವು ಸ್ವಲ್ಪ ಕಾಗುಣಿತ ತಪ್ಪು ಎಲ್ಲಿದೆ ನೋಡಿ ಹೇಳ್ತೀರಾ? ಅಲ್ಲಿ ಒಂದು ಚುಕ್ಕೆ ಇಡಿ ಸಾಕು....

ಚುನಾವಣೆಯ ಅಭ್ಯರ್ಥಿ ಪರದ ಪಾಂಪ್ಲೆಟ್ಟು ಅದು – ಇವರಿಗೆ ಯಾಕೆ ಬೇಕು ಇದು ಅಂದುಕೊಂಡೇ ಕಾಗುಣಿತ ತಪ್ಪಿದ್ದ ಕಡೆ ಸರಿಮಾಡಿದೆ, ಬೇಡದಿದ್ದು ಹೊಡೆದೆ, ಬೇಕಿದ್ದ ಕಡೆ ಅವರು ಹೇಳಿದ ಹಾಗೆ ಚುಕ್ಕಿ ಇಟ್ಟೆ.. ಯಾವ ಪದ ಎಲ್ಲಿ ಬರಬೇಕು ಅಂತ ಗುರುತು ಮಾಡಿ ಅವರಿಗೆ ಕೊಟ್ಟೆ.. ನನ್ನ ಸ್ವಾಪು ಬರಲು ಇನ್ನೂ ಹತ್ತು ಹದಿನೈದು ನಿಮಿಷ. ಅವರೆಡೆಗೆ ತಿರುಗಿ ಏನಿದು? ಅಂದೆ.

ಹದಿನೈದು ವರ್ಷದ ಹಿಂದೆ ಈವಾಗಿರೋ ಏರಿಯಾಗೆ ಅವರು ಬಂದರಂತೆ. ದೇಶ ಸ್ವಾತಂತ್ರ ಗಳಿಸೋದಕ್ಕೆ ಸ್ವಲ್ಪ ಮೊದಲು ಹುಟ್ಟಿದೋರು. ಇವರ ರೀತಿಯೇ ಎಂಟು ಜನರ ಒಂದು ಗುಂಪು ಇದೆ. ಪ್ರತಿ ಸಲ ಎಲೆಕ್ಷನ್ನು ಬಂದಾಗಲೂ ಅಭ್ಯರ್ಥಿಗಳ ಹಿನ್ನೆಲೆಗಳನ್ನ ಕಲೆ ಹಾಕ್ತಾರಂತೆ. ಅಭ್ಯರ್ಥಿಗಳ ಗುಂಪಿನಲ್ಲಿ ಸಜ್ಜನ ಅಂತ ಯಾರು ಖಾತ್ರಿಯಾಗ್ತಾನೋ ಆತನ ಬಗ್ಗೆ ಇವರುಗಳು ತಾವೇ ಕೈಯಿಂದ ಕಾಸು ಕಾಕಿಕೊಂಡು ಪ್ರಚಾರ ಮಾಡ್ತಾರಂತೆ. ಪ್ರಚಾರದ

ಅಂಗವಾಗಿ ಈ ಪಾಂಪ್ಲೆಟ್ಟು...! ಇದನ್ನೂ ಇವರೇ ಮಾಡಿಸೋದು, ಇವರು ಹೀಗೆ ಪ್ರಚಾರ ಮಾಡುತ್ತಾರೆ ಅಂತ ಸ್ವತಃ ಅಭ್ಯರ್ಥಿಗೂ ಗೊತ್ತಿಲ್ಲ..

ಸರಿ ನೀವು ಹೀಗೆ ಪ್ರಚಾರ ಮಾಡಿದೋರು ಗೆದ್ದಿದ್ದಾರಾ?

ಒಂದೇ ಒಂದುಸಲ ಗೆದ್ದರು, ಆದರೆ ಪಾರ್ಟಿ ಹಾರಿಬಿಟ್ಟರು...

ಹಾಗಿದ್ರೆ ಅವರಂಥೋರಿಗೆ ನೀವು ಬೆಂಬಲ ಸೂಚಿಸಿದ್ದು ತಪ್ಪಾಯ್ತಲ್ಲಾ?

ನೀವು ಹೇಳೋದೂ ಸರಿ ಸಾರ್ ಆದರೆ ಯಾರೋ ಒಬ್ಬ ಕೆಟ್ಟ ಹುಳು ಇರ್ತಾನೆ ಅಂತ ನಾವು ಎಲ್ಲರನ್ನೂ ಹಾಗೇ ಯಾಕೆ ನೋಡಬೇಕು? ನಮ್ಮ ಗುಂಪಿನಲ್ಲೂ ನೀವು ಹೇಳಿದ್ದನ್ನೇ ಹೇಳೋರು ಇದಾರೆ. ಆದರೆ ನಮಗೆ ಒಳ್ಳೆ ಹಿನ್ನೆಲೆ ವ್ಯಕ್ತಿ ಬೇಕು ಅಂದಾಗ ಅವನ ಬಗ್ಗೆ ಪ್ರಚಾರ ಮಾಡಲೇಬೇಕು ಅಲ್ಲವಾ? ಅದೂ ಅಲ್ಲದೇ ನಾವು ಹೀಗೆ ಅವನ ಪರವಾಗಿ ಪ್ರಚಾರ ಮಾಡಿದೆವು ಅಂತಲೂ ಅವನಿಗೆ ತಿಳೀಬಾರದು ಹಾಗೆ ಇರ್ತೀವಿ ನಾವು....

ಅವನಿಗೆ ಯಾಕೆ ತಿಳೀಬಾರ್ದು ಸಾರ್ ನಿಮ್ಮಂಥೋರು ಅವನಿಗೆ ಪ್ರಚಾರ ಮಾಡಿದರು ಅಂತ....?

ಯಾಕೆ ಅಂದರೆ ನಾಳೆ ಅವನು ಇದನ್ನೇ ಪ್ರೊಜೆಕ್ಟು ಮಾಡಿಕೋಬಾರ್ದು ಅಂತ ಒಂದು, ಇನ್ನೊಂದು ನಾಳೆ ಅವನು ಯಾವುದಾದರೂ ಅಧಿಕಾರಕ್ಕೆ ಬಂದ ಅನ್ನಿ, ನಾವು ಹೋಗಿ ಅವನ ಹತ್ತಿರ ನಮ್ಮ ಫಲಾನುಭವ ಕೇಳಬಾರದು ಅಲ್ಲವಾ ಅದಕ್ಕೆ.....

ಅಲ್ಲಾ ಅದೇನೋ ಸರಿ, ನಿಮಗೆ ಒಳ್ಳೆ ಹಿನ್ನೆಲೆ ಇರೋ ಮನುಷ್ಯ ಸಿಗಬೇಕಲ್ಲಾ?

ಇರ್ತಾರೆ ಸಾರ್ ಅಂಥೋರು ಇರ್ತಾರೆ ಆದರೆ ನಮ್ಮ ಕಣ್ಣಿಗೆ ಬೀಳೋಲ್ಲ.....

ಸರ ಅಂತ ಮನುಷ್ಯನಿಗೇ ವೋಟು ಹಾಕ್ತೀರಿ ಅನ್ನಿ, ಆತ ಗೆಲ್ಲಬೇಕಲ್ಲಾ?

ಗೆಲ್ಲೋದು ಬಿಡೋದು ಬೇರೆ ಸಾರ್. ಒಬ್ಬ ಕೆಟ್ಟವನಿಗೆ ಇವನಿಗೆ ಬರುತ್ತಲ್ಲಾ ಅಷ್ಟು ವೋಟು ತಪ್ಪುತ್ತೆ ಅನ್ನೋ ಸಮಾಧಾನ ಇರುತ್ತೆ ಅಲ್ವಾ?

●

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ವದನ 3. ಕುದುರೆ 5. ಪ್ರಸಾದ 7. ಮರ್ಕಟ 9. ಅನುರಾಗ
10. ಗಟವಾಣಿ 12. ಉಗುರು 14. ಕಕವ 16. ಕರಟ 17. ಶುನಕ

**ಮೇಲಿಂದ ಕೆಳಕ್ಕೆ**

1. ವಸಪ್ರ 2. ನೀರೆ 3. ಕುತರ್ಕ 4. ಮಹಾರಾಣಿ 6. ಸಾಬೂನು 7. ಮಗಳು
8. ಟಗರು 9. ಅವಸಾನ 11. ವಾದಕ 13. ಗುದ್ದಾಟ 15. ವರ್ತಕ 16. ಕಣ್ಣು

# ಮುಗಲ ಮಾರಿಯೊಳಗ ದೇವರ ನಗಿ ನೋಡ್ಕೊಂತ...

**- ಭೂಮಿತಾಯಿ**

ನನ್ನ ತಾಯಾ, (ದೊಡ್ಡಪ್ಪ) ಅಂಗಳದೊಳಗ ಆರಾಮ ಕುರ್ಚಿ ಹಾಕ್ಕೊಂಡು ಆಕಾಶ ನೋಡ್ಕೊಂತ ಕುಂತಾರ ಅಂದ್ರ ಏನೋ ಚಿಂತಿ ಕಾಡ್ತದ ಅಂತನೇ ಅರ್ಥ. ಆವಾಗ ನಾವು ಯಾರೂ ಅವರೊಟ್ಟಿಗೆ ಮಾತಾಡ್ತಿರಲಿಲ್ಲ. ಬೇವಿನ ಮರದ ನೆರಳಾಗ ಕುಂತು ನೀಲಿ ಆಕಾಶದೊಳಗ ಹಾದು ಹೋಗುವ ಬಿಳೀ ಮುಗಿಲು ನೋಡ್ಕೊಂತ ಅವರ ಕೈ ಲೆಕ್ಕಾ ಹಾಕ್ತಿದ್ರು. ಅವರ ಹೆಂಡತಿ ಜಿಯಾ, ಮೊಮ್ಮಾ ಅಂತ ಕರೀತಿದ್ವಿ. ಕುರ್ಚಿಯಿಂದ 'ಜಿಯಾ... ಚಾಯ್.. ಪಿಲಾತೆ' ಅಂತ ಕೇಳಿದ್ರ ಸಾಕು, ಉತ್ತರ ಸಿಕ್ತು ಅಂತನೇ ಅರ್ಥ.

ಛಾ ತರೂತ ನಾನೂ ಅವರ ಗುಡಾಣದಂಥ ಹೊಟ್ಟಿ ಮ್ಯಾಲೆ ನನ್ನ ಕೂಸಿನ್ಹಂಗ ಮಲಗಿಸಿಕೊಂಡು ಗುಳುಗುಳು ಮಾಡೋರು. ನನ್ನ ನಗಿ ಅಲಿಅಲಿಯಾಗಿ ಹರಡ್ತಿತ್ತು. ಏಳುವರಿ ಅಡಿ ಎತ್ತರದ ಅಜಾನುಬಾಹು ನನ್ನ ತಾಯಾ. ಅವರ ಕರಡಿ ಅಪ್ಪುಗೆಯೊಳಗ ನಾನು ಮಾತ್ರ ಯಾವತ್ತಿಗೂ ಕೂಸೇ.

**ಎಂಥ ಸಂದಿಗ್ಧ ಪರಿಸ್ಥಿತಿಯೊಳಗೂ ನಮ್ಮ ಇರುವಿಕೆಗೊಂದು ಅರ್ಥ ಅದ. ಆ ಪರಿಸ್ಥಿತಿಯೂ ನಮ್ಮ ಜೀವಕ್ಕ, ಜೀವನಕ್ಕ ಒಂದು ಅರ್ಥ ನೀಡ್ತದ...**

ಯಾರಿಗೂ ಇರಲಾರದ ಸಲಗಿ ನನಗ ಇತ್ತು. 'ಆಸ್‌ಮಾನ್‌ಸೆ ಕ್ಯಾ ಆಪ್‌ಕೊ ಅಲ್ಲಾತಾಲಾ ನೆ ಜವಾಬ್ ದಿಯಾ?' (ಆಕಾಶದಿಂದ ಆ ದೇವರು ನಿಮಗ ಉತ್ತರ ಕೊಟ್ರೇನು?) ಅಂತ ಕೇಳಿದ್ರ ಅದಕ್ಕೂ ಗುಳುಗುಳು ಮಾಡೂದೆ ಉತ್ತರ ಆಗಿರ್ತಿತ್ತು.

ನಾವೆಷ್ಟೇ ದೊಡ್ಡವರು ಆಗಿದ್ರೂ ಈ ಕರಡಿ ಅಪ್ಪುಗೆ, ಈ ಗುಳುಗುಳು ಮತ್ತು ಅವರ ಮಡಿಲೊಳಗ ಮಗುವಾಗಿ ಮಲಗುವ ವಾತ್ಸಲ್ಯದಿಂದ ಮಾತ್ರ ಯಾವತ್ತೂ ವಂಚಿತರಾಗಿರಲಿಲ್ಲ. ಆದ್ರ ನಾವು ಬೆಳದ್ಹಂಗ ನಮ್ಮ ಪ್ರಶ್ನೆಗಳು ಭಿನ್ನ ಆಗಿರ್ತಿದ್ದವು.

ಬ್ಯಾಸಗಿ ರಾತ್ರಿ ಅದು. ಸ್ವಚ್ಛ ಆಕಾಶ. ಚುಕ್ಕಿ ಅಲ್ಲಲ್ಲೇ ಮಿಣಮಿಣ ಅಂತಿದ್ವು. ದೊಡ್ಡ ಅಂಗಳ, ಬೇವಿನ ಮರ, ತೆಂಗಿನ ಮರ, ಬದಾಮಿ ಮರದ ನೆರಳನಾಗ ನಾವೆಲ್ಲ ಕುಂತು ಆಕಾಶ ನೋಡ್ತಿದ್ವಿ. ಹೋಳಿ ಹುಣ್ಣಿಮಿ ಸಮೀಪ ಇತ್ತು. ಒಂದೆರಡೇ ಮೋಡದ ತುಂಡುಗಳು ದುಡುದುಡು ಓಡಿ ಹೊಂಟಿದ್ವು. ಅದೇ ಆಗ ಕಾಲು ಬಂದ ಉಡಾಳ ಕೂಸಿನ್ಹಂಗ. ಆವಾಗ ತಾಯಾನ ಮಡಿಲೊಳಗ ಕುಂತು ದ್ರಾಕ್ಷಿ ತಿನ್ಕೊಂತ.. 'ಖರೇನೆ ನಿಮಗ ದೇವ್ರು ಉತ್ರಾ ಕೊಡ್ತಾನ? ಖರೇನೆ ದೇವರ ಮನಿ ಆಕಾಶದೊಳಗ ಐತೇನು? ನನಗೂ ಒಮ್ಮೆ ತೋರಸ್ರಿ...' ಎಲ್ಲಾ ಪ್ರಶ್ನೆಗೂ ಉತ್ತರ ಕೊಡೂಕಿಂತ ಮೊದಲು ಉದ್ದಾನುದ್ದ ದ್ರಾಕ್ಷಿ ಆರಿಸಿ ಬಾಯಿಗೆ ಹಾಕ್ತಿದ್ರು.

ಆಮೇಲೆ ತಾಯಾ ಮಾತಾಡಾಕ ಸುರು ಮಾಡಿದ್ರು. ದೇವರು ಆಕಾಶದೊಳಗ ಇರೂದಿಲ್ಲ. ದೇವರು ನಮ್ಮೊಳಗ ಇರ್ತಾನ. ನಮ್ಮ ಮನಸಿನಾಗ ಇರ್ತಾನ. ಮನಸನ್ನು ಆಕಾಶದಷ್ಟು ವಿಶಾಲ ಮಾಡಿಕೊಂಡು ಅವನಿಗೆ ನಮ್ಮೊಳಗೇ ಹುಡುಕಬೇಕು. ಅವಾಗ ಮನಸ ಮ್ಯಾಲೆ ಕವಿದಿರುವ ಮೋಡಗಳೆಲ್ಲ ಚದುರಿ ಹೋಗ್ತಾವ. ನಮ್ಮ ಚಿಂತಿನೂ ಹಂಗೆ. ನಮ್ಮನ್ನೇ ನಾವು ನೋಡ್ಕೋಬೇಕು. ನಮ್ಮನ್ನ ಆವರಿಸಿರುವ ಮೋಡಗಳು ಚದರುವ ಹಂಗ ಮಾಡಬೇಕು. ಆಗ ಪರಿಹಾರದ ಚುಕ್ಕಿಯ ಹೊಳಹು ನಮಗೇ ಹೊಳೀತಾವ. ನಮ್ಮೊಳಗಿನ ದೇವರನ್ನು ಹುಡುಕುವ ಪರಿ ಮಾತ್ರ ನಾವೇ ಕಂಡುಕೋಬೇಕು. ನಮ್ಮ ದೇವರನ್ನು ನಾವೇ ಕಾಣಬೇಕು ಅಂದ್ರು.

'ಅಂದ್ರ, ನಿಮ್ಮ ದೇವರು ಬ್ಯಾರೆ, ನನ್ನ ದೇವರು ಬ್ಯಾರೆ ಏನು' ಅಂದೆ.

'ದೇವರು ಅಂದ್ರ ಅದೊಂದು ಸತ್ಯ. ನಿನ್ನ ಸತ್ಯವೇ ಬೇರೆ, ನನ್ನ ಸತ್ಯವೇ ಬೇರೆ. ಒಂದು ಪರಿಪೂರ್ಣ ಸತ್ಯವಾಗಿರೂದು ಸಾಧ್ಯವೇ ಇಲ್ಲ. ಒಂದು ಸತ್ಯಕ್ಕೆ ನಾಲ್ಕಲ್ಲ ಹದಿನಾರು ಆಯಾಮ ಇರ್ತಾವ. ಒಂದು ಇನ್ನೊಂದಕ್ಕ ಸತ್ಯ ಅಲ್ಲ ಅಂತ ಅನ್ನಸಬಹುದು.'

'ಹಂಗಾದ್ರ ಎಲ್ಲಾನೂ ಸತ್ಯ ಅಲ್ಲ, ಎಲ್ಲಾನೂ ಸುಳ್ಳಲ್ಲ ಅಂತ ಅಂತೀರೇನು? ಯಾರಿಗೂ ಕೆಡುಕಾಗದೇ ಇರೂದು ಸತ್ಯ. ನಮ್ಮೊಳಗಿನ ಸತ್ಯವನ್ನು ನಾವೇ ಹುಡುಕಬೇಕು.'

ಹಿಂಗೇ ಸೂಫಿ ಸಂತನಹಂಗ ಮಾತಾಡತಿದ್ದ ತಾಯಾಗ ಸಿಟ್ಟು ಬಂದ್ರ ಮಾತ್ರ ಅವರೇ ಹೇಳೂಹಂಗ ಹೈವಾನ್ ಆಗ್ತಿದ್ರು. ಸಿಕ್ಕಿದ್ದು ತೊಗೊಂಡು ಆಳಮಕ್ಕಳಿಗೆ ಹೊಡೀತಿದ್ರು. ಅವರ ಆ ಅವತಾರ ಮಾತ್ರ ದಿಗಿಲು ಹುಟ್ಟಸ್ತಿತ್ತು. ಯಾಕ ಅವಾಗ ಅವರೊಳಗಿನ ದೇವರು ಮಲಗಿರ್ತಿದ್ದ? ಅಥವಾ ಅವರೇ ಹೇಳುಹಂಗ ಆ ದೇವರೇ ಇಲ್ಲವಾಗ್ತಿದ್ದನಾ? ಗೊತ್ತಿಲ್ಲ. ಈಗ ಹೇಳಾಕ ಅವರಿಲ್ಲ.

ಆದ್ರ ಅವರು ತೋರಿದ ಆ ದಾರಿ ಈಗಲೂ ಭಾಳಷ್ಟು ಸಲೆ ಖರೆ ಅನ್ನಸ್ತದ. ಹೆಣ್ಮಕ್ಕಳ ಜೀವನದಾಗ ಒಂದು ಹಂತ ಎಂಥಾದ್ದು ಬರ್ತದ ಅಂದ್ರ, 'ಎಲ್ಲಾರಿಗೆ ನಾವು ಬ್ಯಾಡಾಗೇವಿ. ನಾವಿರಲಿಲ್ಲಂದ್ರೂ ಎಲ್ಲಾನೂ ನಡದು ಹೋಗ್ತದ. ನಾವು ಎಲ್ಲಿಯೂ ಅನಿವಾರ್ಯ ಅಲ್ಲ. ನಾವಿರಲಿಲ್ಲ ಅಂದ್ರ ನಮಗಿರುವ ಕಷ್ಟಗಳು ನಮಗಷ್ಟೇ ಇರೂದಿಲ್ಲ. ಆದ್ರ ಉಳದೋರು ಆರಾಮ ಇರ್ತಾರ' – ಅನ್ನೂದೊಂದು ಭಾವ ಗಟ್ಟಿಯಾಗಾಕ ಸುರುಮಾಡ್ತದ. ಇದೊಂಥರ ಹೆಣ್ಮಕ್ಕಳ ಜೀವನಾಸಕ್ತಿ ಆಸ್ಥೆಯನ್ನೇ ಕೊಂದು ಬಿಡ್ತದ. ಏನು ಮಾಡಿದ್ರೂ ಅಷ್ಟೆ, ಎಷ್ಟು ಮಾಡಿದ್ರೂ ಅಷ್ಟೆ.. ಯಾರಿಗರೆ ಯಾಕ ಮಾಡಬೇಕು ಇಂಥವೇ ಅಸಮಾಧಾನಗಳು ಗೂಡು ಕಟ್ತಾವ. ಈ ಗೂಡಿನೊಳಗ ಸಾವನ್ನು ಪ್ರೀತಿಸುವ ಸೈತಾನ ವಾಸಸ್ತಾನ. ಜೀವದ ಹಕ್ಕಿಯನ್ನ ತನ್ನ ಗೂಡಿನೊಳಗ ಮೆತ್ತನೆಯ ಹಾಸು ಮಾಡಿಕೊಂಡು ಮಲಗಿ ಬಿಡ್ತಾನ. ಅದು ಕೊಸರಾಡ್ತದ. ಒದ್ದಾಡ್ತದ. ಉಸಿರುಗಟ್ಕೊಂಡು, ಬದುಕಾಕ ಒಂದು ಸಣ್ಣ ಎಳಿ ಸಿಕ್ರೂ ಸಾಕು ಅಂತ ಪಿಳಿಪಿಳಿ ಕಣ್ಣು ಬಿಟ್ಕೊಂಡು ಕುಂತಿರ್ತದ. ನಿದ್ದಿ ಅನ್ನೂದು ಅದಕ್ಕ ಬಂಗಾರದ್ಹಂಗ ಭಾಳ ತುಟ್ಟಿ. ಹಿಂಗಾದಾಗಲೆಲ್ಲ ಎಲ್ಲಾರು ಮಲಕ್ಕೊಂಡ ಮ್ಯಾಲೆ ಬಾಲ್ಕನಿಗೆ ಬಂದು ನಿಂದರ್ತೀನಿ. ಸ್ವಚ್ಛ ಮುಗಲನಾಗ ಮೋಡಗಳೂ ಓಡತಿರ್ತಾವ. ಕೆಲವೊಮ್ಮೆ ಮಂದ. ಕೆಲವೊಮ್ಮೆ ಅಗ್ದಿ ಚುರುಕಾಗಿ.


ನಮ್ಮ ಪರಿಸ್ಥಿತಿಗೆ ಕಾರಣ ಹುಡುಕೂದೇ ಆಕಾಶ ನೋಡ್ಕೋಂತ ಮನಸಿನೊಳಗ ಹಣಕಿ ಹಾಕ್ತೀವಿ.

ಯಾರಿಗೂ ನಾವು ಅನಿವಾರ್ಯವಿಲ್ಲ ಅಂತ ಅಂದ್ಕೊಂಡ ಕ್ಷಣದ್ಹಂಗೇ ಒಂದರೆ ನಿಮಿಷ ಮರುದಿನದ ಬೆಳಗು ನಾನಿಲ್ಲದೆ, ನನ್ನ ಗಂಡ ಮಕ್ಕಳಿಗೆ ಹೆಂಗಿರಬಹುದು, ನಾನಿಲ್ಲದ ಸತ್ಯವನ್ನು ನನ್ನ ಹೆತ್ತವರು ಹೆಂಗ ಒಪ್ಕೊಬಹುದು ಅನ್ನೂ ಪ್ರಶ್ನೆಗಳು ಈ ಮೋಡದೊಂದಿಗೆ ಹಾದು ಹೋಗ್ತಾವ.

ಮತ್ತ ಹಂಗೇ ಆಕಾಶ ಸ್ವಚ್ಛ ಆಗ್ತದ. ಮನಸೂ ಕೆಲವೊಮ್ಮೆ ಆಕಾಶದೊಳಗ ಎಲ್ಲೊ ಚುಕ್ಕಿಯಾಗಿ ನನ್ನನ್ನ ನೋಡ್ತಿರುವ ತಾಯಾ, ಮೊಮ್ಮಾ ನೆನಪಾಗ್ತಾರ.

ಎಂಥ ಸಂದಿಗ್ಧ ಪರಿಸ್ಥಿತಿಯೊಳಗೂ ನಮ್ಮ ಇರುವಿಕೆಗೊಂದು ಅರ್ಥ ಅದ. ಆ ಪರಿಸ್ಥಿತಿಯೂ ನಮ್ಮ ಜೀವಕ್ಕ, ಜೀವನಕ್ಕ ಒಂದು ಅರ್ಥ ನೀಡ್ತದ. ಈ ಅರ್ಥದ ಹೊಳಹು ಹೊಳದಾಗ ಆಕಾಶದಾಗ ಬೂದು ಬಣ್ಣ ಹೋಗಿ, ತಿಳಿ ಗುಲಾಬಿ ಬಣ್ಣ ಮೂಡ್ತಿರ್ತದ. ಜೊತಿಗೆ ಸೂರ್ಯನೂ ಹುಟ್ಟತಿರ್ತಾನ. ಅದರೊಟ್ಟಿಗೆ ನಾವೂ ಮತ್ತ ಹುಟ್ಟಿ ಬರಬೇಕು. ಆ ಹೊಸ ಹೊಳಹಿನೊಂದಿಗೆ. ನಮ್ಮ ಸತ್ಯದ ದೇವರು ನಮಗ ಕಾಣುವ ಹೊತ್ತದು. ಮುಗಿಲಮಾರಿಯೊಳಗ ದೇವರು ನಕ್ಕು ಮುಂದ ಸಾಗೂ ಹೊತ್ತದು. ನೋಡುವ ಕಣ್ಣುಬೇಕು. ಹುಡುಕುವ ಮನಸು ಬೇಕು. ತಾಯಾನ್ಹಂಗ..!

●



# ಮಕ್ಕಳ ಆಟದ ಸಾಮಾನು - ಈಗಿನ ಟಾಯ್ಸ್

- ಇ.ಆರ್. ರಾಮಚಂದ್ರನ್

'**ಯಾ**ಕೋ ಅವ್ನಿಗೆ ಬೈಯ್ತಿದ್ದೆ! ಅವ್ನು ಇನ್ನು ಮಗು ಅಲ್ವಾ?'

'ಅಜ್ಜಿ! ನಿನ್ನ ಮರಿಮಗನ್ನ ಇನ್ನು ಮಗು ಅಂದ್ಕೊಂಡಿದೀಯ... ಹತ್ತು ವರ್ಷಕ್ಕೆ ಆಗಲೇ ಧಡಿಯ ಆಗಿದಾನೆ.... ಅವನಿಗೆ ದಿನಾ ಅಂಗಡಿಗೆ ಹೋಗಿ ಏನಾದ್ರೂ ಕೊಂಡ್ಕೊಂಡು ಬರ್ಬೇಕು. ಓದು ಬರೆಯೋದು ಏನು ಬೇಡ.'

'ಮಕ್ಕಳು ಹಾಗೇ ಅಲ್ವೇನೋ! ಆವಾಗ್ಲೆ ಅವರಿಗೆ ಹೊತ್ತು ಹೋಗೋದು.'

'ನಮಗೆ ಇದೆಲ್ಲ ಎಲ್ಲಿತ್ತಜ್ಜಿ?'

'ಸಾಕು ಸುಮ್ನಿರೊ!.... ಎಲ್ಲಾ ಕಾಲದಲ್ಲೂ ಇದು ಇದ್ದದ್ದೆ. ನಿನ್ನ ಅಜ್ಜ ನಮ್ ಮನೇಯಿಂದ ಮೂರ್ನೇಮನೇಲಿ ಇದ್ರು. ನಮ್ಮ ಮದುವೇಗ್ಮುಂಚೆ ನೋಡಿದೀನಿ. ಯಾವಾಗ್ಲೂ ಮರಕೋತಿ, ಚಿನ್ನಿ ದಾಂಡ್ಲು, ಗೋಲಿ ಆಡಿದ್ದೇ ಆಡಿದ್ದು. ಕೋತಿಗಳು ಎಷ್ಟೋ ವಾಸಿ. ಓಡ್ಸಿದ್ದರೆ ಹೆದರಿ ಓಡ್ಹೋಗೋದು. ಒಂದು ಸಲ ಮರಕೋತಿ ಆಡ್ತಾ ರೆಂಬೆ ಹಿಡ್ಕೊಂಡು ಧುಮಿಕಿದ್ರು, ರೆಂಬೇನು ಕೈಲೇ ಬಂತು ...ಆಮೇಲೆ ನೋಡಿದ್ರೆ ಕೈಲಿದ್ದಿದ್ದು ರೆಂಭೆ ಅಲ್ಲ ಹಾವು! ಅದನ್ನ ನೋಡಿದ್ದೇ ಕಿರಿಚ್ಕೊಂಡು ಅಗ್ರಹಾರವೆಲ್ಲಾ ಓಡುವಾಗ ಯಾರೋ ಬಂದು ಅವರ ಕಪಿಮುಷ್ಟಿಯಿಂದ ಹಾವ್ನ ಕಿತ್ತೊಗದ್ರು!'

'ಇದೆಲ್ಲಾ ಹುಡುಗ್ರ ಸಮಾಚಾರ.... ನಿನಗೆ ಹ್ಯಾಗೆ ಗೊತ್ತು ಅಜ್ಜಿ ಇದೆಲ್ಲಾ?'

'ನನ್ನ ಅಣ್ಣ ಇವ್ರ ಗುಂಪಲ್ವಾ? ಒಬ್ಬರಿಗೊಬ್ಬರು ಹೊಡೆದಾಡ್ಕೊಂಡು ಜುಟ್ಟು ಕಿತ್ಕೊಂಡು ಮನೇಗ್ ಬಂದು ಏಟ್ತಿನ್ನೋವ್ರು.'

'ಜುಟ್ಟು?'

'ಇವರಿಗೆಲ್ಲಾ ಜುಟ್ಟು ಇತ್ತಲ್ಲೋ ಆಗ....! ಅವ್ರ ಕುಣಿಯುವಾಗ ಜುಟ್ಟೂ ಜೊತೆಗೆ ಕುಣಿಯೋದು!'

'ಹೌದಾ! ಆವಾಗ ಆಟದ ಸಾಮಾನು ಜಾಸ್ತಿ ಇರ್ಲಿಲ್ಲ ಅಲ್ವಾ ಅಜ್ಜಿ?'

'ನಿಮ್ಮಜ್ಜ ಹೇಳಿಕೇಳಿ ಪುರೋಹಿತರ ಮನೇವ್ರು... ದುಡ್ಡು ಎಲ್ಲಿಂದ ಬರುತ್ತೆ? ನಾನು ಹೇಳಿದ ಆಟದ ಸಾಮಾನೆಲ್ಲಾ ಸೇರಿ ಒಂದಾಣೆ ಆಗಿದ್ರೆ ಹೆಚ್ಚು.'

'ಅಷ್ಟೇನಾ?'

'ಮತ್ತೆ? ಆಮೇಲೆ, ನಿಮ್ಮಪ್ಪ ಹುಡುಗ್ನಾಗಿದ್ದಾಗ ಬುಗುರಿ, ಮ್ಯಾಚಸ್, ಸ್ಟಾಂಪು, ಇಸ್ಪೀಟು, ಕಾಯಿನ್ ಕಲೆಕ್ಷನ್ನು ಅಂತ ಅದರಲ್ಲೇ ಮುಳುಗಿರೋವ್ನು... ಒಂದ್ಸಲ ಕಾಂಗ್ರೆಸ್

ಎಕ್ಸಿಬಿಷನಲ್ಲಿ ಒಂದು ಕಾರ್ಕ್ ಬಾಲು ಕೊಡ್ಸಿದ್ದರು.. ಅದನ್ನಿಟ್ಕೊಂಡು ಓಣೀಲೇ ಕಿರ್ಕೆಟ್ಟು ಆಡೋವ್ರು..'

'ಅಜ್ಜಿ! ಕಿರ್ಕೆಟ್ ಅಲ್ಲ ಕ್ರಿಕೆಟ್ ಅದು..'

'ಏನೋ ಸುಡುಗಾಡು.. ಆಮೇಲೆ ಗಾಳಿಪಟ. ಈ ಆಟಗಳೆಲ್ಲಾ ಆಗ ಕಾಲ ಕಾಲಕ್ಕೆ ಬರೋದು ನೋಡು. ನಿಮ್ಮಪ್ಪಾನೂ ಚೆನ್ನಾಗಿ ಏಟು ತಿಂದಿದ್ದಾನೆ ಪಾಪ. ಒಂದ್ಸರ್ತಿ ಅವನು ಬಾರ್ಸಿದ ಬಾಲು ಮೂಲೆ ಮನೆ ಮಂಡೋದರಿ ಮಂಡಿಗೆ ತಾಕಿ ಮೂಳೆ ಗಡಿಗೆ ದಪ್ಪ ಊದಿತ್ತಪ್ಪಾ... ಆಗ ಅವನ್ನ ರೂಮ್ನಲ್ಲಿ ಮೈಮುರಿಯೋ ಹಾಗೆ ಹೊಡೆದು ಸೌಟ್ನ ಕಾಯ್ಸಿ ಬರೆ ಹಾಕಕ್ಕೆ ಹೊರಟಿದ್ದರು ನಿಮ್ಮಜ್ಜ! ಆಟದ ಸಾಮಾನಂದ್ರೆ ನೋಡು ಜ್ಞಾಪಕಕ್ಕೆ ಬಂತು.... ಮುಂಚೆ ಎಲ್ಲಾ ಆಟದ ಸಾಮಾನುಗಳೆಲ್ಲಾ ಚೆನ್ನಪಟ್ಟಣದಿಂದ ಬರ್ತಾ ಇತ್ತು... ಗಿಲಕಿ, ಒಂದರೊಳಗೆ ಒಂದು ಹೋಗುವ ಬೊಂಬೆಗಳು, ಕುತ್ತಿಗೆ ಅಲ್ಲಾಡ್ಸೋ ನರ್ತಕಿ, ನಗ್ತಾ ಕೂತಿರೋ ಅಂಗಡಿ ಶೆಟ್ರು....'

'ಈಗಲೂ ಅಲ್ಲಿಂದ ಬರುತ್ತಲ್ಲಾ ಅಜ್ಜಿ...'

'ಈಗ ಚೈನಾದವರು ನಮ್ಮ ಆಟದ ಸಾಮಾನುಗಳನ್ನ ಮಾಡಿ ಚೆನ್ನಪಟ್ಟಣದಲ್ಲಿ ಸಿಕ್ಕಾಪಟ್ಟೆ ಹೇರಿದಾರಂತಲ್ಲಾ...... ಎಲ್ಲದಕ್ಕೂ ಸೂಜಿ ಕಣ್ಣಂತೆ! ಸೀತಮ್ಮ ನಿನ್ನೆ ಹರಿಕಥೇಲಿ ಹೇಳ್ತಿದ್ರು.... 'ಚೆನ್ನಪಟ್ಣಾನ ಈಗ ಚೈನಾಪಟ್ಣಾಂತ' ಕರೀತಾರಂತೆ!'

'ಹ ಹ ಅಜ್ಜಿ! ಈ ಹೆಸರ್ನ ಸೀತಮ್ಮಾನೇ ಇಟ್ಟಿರ್ಬೇಕು!'

'ತಲೆಹರಟೆ! ಇನ್ನು ನಿನಗೆ ಏನು ಕಡಿಮೆ ಮಾಡಿದ್ನೋ ನಿಮ್ಮಪ್ಪ ! ಮೂರು ಹೊತ್ತೂ ಕಿರ್ಕೆಟ್ - ಕ್ರಿಕೆಟ್ ಆಡಿದ್ದೇ ಆಡಿದ್ದು. ಆಮೇಲೆ ಕಿವಿಗೆ ಟ್ರಾನ್ಸಿಸ್ಟರ್ ಇಟ್ಕೊಂಡು ಊರೆಲ್ಲಾ ಸ್ಕೋರ್ ಕೇಳ್ತಾ ಸುತ್ತಾ ಇರ್ತಿದ್ದೆ.'

'ಅಜ್ಜಿ! ಟ್ರಾನ್ಸಿಸ್ಟರ್ ಆಟದ ಸಾಮಾನಾ?'

'ಮತ್ತಿನ್ನೇನು? ಅದಾದ್ಮೇಲೆ ಕಿವಿಗೆ ಟೇಪ್ ರೆಕಾರ್ಡರ್ ಸಿಕ್ಕಿಸ್ಕೊಂಡು, ಪೋಸ್ಟ್ ಮ್ಯಾನ್ ಬೀಟ್ನಲ್ಲಿ ಬರೋಹಾಗೆ ವಾಕ್ಮನ್ ಅಂತ ವಾಕಿಂಗ್ ಮಾಡಿದ್ದೂ ಮಾಡಿದ್ದೇ!'

'ಅಜ್ಜಿ! ಇದೆಲ್ಲಾ ಆಟದ ಸಾಮಾನು ಅಂತ ಯಾವ ಗಿಳಿ ಶಾಸ್ತ್ರದಲ್ಲಿ ಹೇಳಿದೆ?'

'ಅಲ್ವೋ! ಮೂರು ಹೊತ್ತೂ ಅದನ್ನೇ ಹಿಡಕೊಂಡು ಕೂತಿದ್ರೆ ಅದು ಆಟದ್ಸಾಮಾನು ಅಲ್ದೆ ಮತ್ತೇನು? ನಿಮ್ಮಪ್ಪ ದಿನಾ ಅಠಾರ ಕಛೇರಿಗೆ ಸೈಕಲ್ನಲ್ಲಿ ಹೋಗೋವ್ನು. ಗಾಳಿ ಹೊಡೆಯೋವ್ರು ಇರ್ಲಿಲ್ಲಾ, ವಾಲ್ಟ್ಯೂಬ್ ಹೋಯ್ತೂಂತ ಎಷ್ಟೋ ಸರ್ತಿ ಸೈಕಲ್ನ ಮನೇವರಗೂ ತಳ್ಕೊಂಡು ಬರೋವ್ನು. ಸೀಮೆಣ್ಣೆ ಬುಡ್ಡಿದೀಪ ಹಚ್ಕೊಂಡು ಹೋಗೋವ್ನು. ಸೊಸೈಟೀಲಿ ಸಾಲ ಮಾಡಿ ಕೊನೆಗೆ ರಿಟೈರಾಗುವಾಗ ಡೈನಮೊ ಇರೋ ಸೈಕಲ್ ತೊಗೊಂಡ. ಫ್ರೆಂಡ್ಸ್ ಹತ್ತಿರ ಇದೆ, ನನಗೂ ಬೇಕೂಂತ ರಗಳೆ ಮಾಡಿ ಊರು ಸುತ್ತಕ್ಕೆ ನೀನು ಸ್ಕೂಟರ್ ತರಿಸ್‌ಕೊಳ್ಳಿಲ್ವಾ? ಯಾರ್ದೋ ಕಾಲು ಹಿಡಿದು ಫಾರಿನ್ ಖೋಥಾಂತ ನಿಮ್ಮಪ್ಪ ತರಿಸ್ಕೊಟ್ನಲ್ಲಾ.'

'ಫಾರಿನ್ ಎಕ್ಸ್ಚೇಂಜ್ ಕೋಟಾ ಅಜ್ಜಿ, ಖೋಥಾ ಅಲ್ಲಾ!'

‘ಏನೋ ಹಾಳು. ಅದಿರ್ಲಿ, ನಿನ್ನ ಮಗ ಏನು ಮಾಡ್ದ? ಏನು ಬೇಕಂತೆ?’

‘ನಿನ್ನ ಮರಿಮಗನಿಗೆ ಮೊಬೈಲ್ ಬೇಕಂತೆ.’

‘ಇದು ಈಗಿನ ಆಟದ ಸಾಮಾನೇ! ಎಲ್ಲಾರು ಇಟ್ಕೊಂಡಿದಾರಲ್ಲೋ ಈಗ. ನಮ್ಮ ಮನೆ ಕೆಲಸದವ್ಳು, ಬಿಎಂಟಿಸಿ ಡ್ರೈವರ್, ಬೀದಿಲಿ ಕಸ ಗುಡಿಸೋವ್ರು, ಗಾರೆ ಕೆಲಸದೋವ್ರು..... ಒಂದು ಕೈಲಿ ಅದನ್ನ ಕಿವಿಗೆ ಸೇರ್ಸಿ ಇನ್ನೊಂದು ಕೈಲಿ ಕೆಲಸ ಮಾಡ್ತಾರಲ್ಲಾ.. ಅವನ್ಗೂ ಕೊಡ್ಸು ಪಾಪ, ಓದ್ತಾನೇ ಅವನ ಫ್ರೆಂಡ್ಸ್‌ಗೆ ಫೋನ್ ಮಾಡ್ಕೊಂಡಿರ್ತಾನೆ!’

‘ಅವನ್ನ ತಡೀ ಬೇಕಾದವ್ಳು ನೀನೇ ಹೀಗೆ ಹೇಳ್ತಿಯ? ಫೋನ್ ಒಂದೇ ಅಲ್ಲ ಅಜ್ಜಿ. ಅವನಿಗೆ ಫೋಟೊ ತೆಗೆಯೋದು, ಹಾಡು ಬರೋದು, ಡ್ಯಾನ್ಸು ನೋಡೋದು ಇರೋ ಸ್ಯಾಂಸಂಗ್ ಫೋನು ಬೇಕಂತೆ.’

‘ಸ್ಯಾಂಸಂಗ್ ಅಂದ್ರೆ ಮೊನ್ನೆ ಪಕ್ಕದ ಮನೆ ಹುಡುಗಿ ಅದರಿಂದ ಲಲಿತಾ ಸಹಸ್ರ ನಾಮ ಹಾಕ್ತಲ್ಲಾ ಆ ತರದ್ದಾ?’

‘ಅದೇ!’

‘ಕೊಡಿಸೊ. ನಾವೂ ದೇವ್ರ ಹಾಡೂ ಕೇಳ್ಬಹುದಲ್ಲಾ. ನಮ್ಮ ಸೀತಮ್ಮ ವಾಕಿಂಗ್ ಹೋದಾಗ ಅದರಲ್ಲಿ ವೆಂಕಟೇಶ ಸುಪ್ರಭಾತ, ವಿಷ್ಣು ಸಹಸ್ರ ನಾಮ ಕೇಳ್ತಾರೆ.’

‘ಸರಿಹೋಯ್ತು! ನಿನ್ನ ಶಿಫಾರ್ಸು ಬೇರೆ! ಅದು ತರಬೇಕೂಂದ್ರೆ ನನ್ನ ಅರ್ಧಸಂಬಳ ಎಗರಿ ಹೋಗುತ್ತೆ.’

‘ಅಷ್ಟಾಗುತ್ತಾ! ನಾವು ಕಾಶಿಗೆ ಹೋದಾಗ ನಿಮ್ಮಪ್ಪ ಯಾತಕ್ಕೂ ಬೇಕಾಗುತ್ತೆ ಇಟ್ಕೊಂಡಿರೂಂತ ಸ್ವಲ್ಪ ದುಡ್ಕೊಟ್ಟಿದ್ದ. ಅದನ್ನೂ ಸೇರ್ಸಿ ತೊಗೊಂಡು ಬಾ.’

‘ಇದರ ಜೊತೆ ಅವನಿಗೆ ಸಣ್ಣ ಕಂಪ್ಯೂಟರ್ ಬೇಕಂತೆ.’

‘ಸಣ್ಣ ಕಂಪ್ಯೂಟರ್ರಾ? ಈಗ ದೊಡ್ಡು ಒಂದಿದ್ಯಲ್ಲಾ. ಇದೂ ಆಟದ್ ಸಾಮಾನಿರ್ಬೇಕು.’

‘ಹೊಸ್ದು ಪುಟ್ಟದಾಗಿ ಬರುತ್ತೆ. ಕೈಲಿಟ್ಕೊಂಡು ಓಡಾಡ್ಬಹುದು. ಟ್ಯಾಬ್ಲೆಟ್ ಅಂತ ಕರಿತಾರೆ ಅದನ್ನ.’

‘ಅಯ್ಯೋ! ನಾನು ಮೂರು ಹೊತ್ತು ಟ್ಯಾಬ್ಲೆಟ್ ತಿಂತಿನಲ್ಲೋ!’

‘ಅದಲ್ಲಾ ಅಜ್ಜಿ! ಅದನ್ನ ಪಿಲ್ಸ್ ಅಂತ ಕರಿತಾರೆ.’

‘ಪಿಲ್ಸಾ? ಮನೆ ಹಾಳ! ಅದು ‘ನಿರೋಧ್ ಮಾಲ–ಡಿ’ ಪಿಲ್ಸೇನೋ? ಅದನ್ನ ಕೊಡ್ತಿದ್ಯ ನಂಗೆ. ಥೂ!’

‘ಅಜ್ಜಿ ರಿಲಾಕ್ಸ್, ನೀನು ತೊಗೋಳ್ತಿರೋದು ಉಬ್ಬಸದ ಮಾತ್ರೆನೇ..... ಸಣ್ಣ ಕಂಪ್ಯೂಟರ್ನ್ನ ಈಗ ಟ್ಯಾಬ್ಲೆಟ್, ಐ–ಪ್ಯಾಡ್ ಅಂತ ಕರಿತಾರೆ.’

‘ಸದ್ಯ! ಇದೆಲ್ಲಾ ಕೊಡಿಸೋ ಅಷ್ಟೊತ್ತಿಗೆ ನಮ್ಮ ಜನ್ಮ ನಾಯಿ ಪಾಡೇ! ಇದು ಆಟದ್ಸಾಮಾನೆ ಕೊಡ್ಸು.’

‘ಈ ಮುತ್ತಜ್ಜಿ ಮರಿಮಗ ಸೇರಿದ್ರೆ ನನಗೆ ನೀರಿಲ್ದೆ ಕ್ಷೌರ ಖಂಡಿತ!’ ●

# Pay ಕಮೀಷನ್

**- ಜಿ.ಬಿ. ಕೋಟೆ ಅನಂತ್**

**ಮ**ಕ್ಕಳು ಸ್ಕೂಲಿಗೆ ಆಗಲೇ ಹೊರಟಾಗಿತ್ತು. ಇನ್ನು ಶೇಖರ್ *Office* ಕೆಲಸದ ಮೇಲೆ *Tour* ಹೋಗಿದ್ದಾರೆ. ನಾನು *Office*ಗೆ ಹೊರಡಕ್ಕೆ ಇನ್ನೂ ಟೈಮ್ ಇದೆ. ಮನೆ ಕೆಲಸದ ಕಡೆ ಗಮನ ಕೊಟ್ಟೆ, ಪಕ್ಕದಲ್ಲೇ ಕೆಲಸದ ಗಂಗಿ ನಂಗೆ *Help* ಮಾಡ್ತಾ ಇದ್ದಳು.

ಕೆಲಸ ಮಾಡ್ತ ಮಾಡ್ತ ಏನಾದರೂ ಕಥೆ ಶುರು ಮಾಡೋದು ಗಂಗಿ ಅಭ್ಯಾಸ. ಅಮ್ಮೋರೆ... ಅಂತ ರಾಗ ತೆಗೆದಳು. ಏನೇ ಗಂಗಿ ಅಂದೆ. ಅಮ್ಮೋರೆ ಅದೆಂತದೋ ಪೈರಿಮಿಸಿನ್ನಂತೆ. ಏನೇ ಅದು ಪೈರಿವಿಷನ್ ಅಂದೆ ನಾನು. ಇದನ್ನ ಯಾರು ಹೇಳಿದ್ರೆ ಗಂಗಿ ನಿಂಗೆ ಅಂದೆ. ನಮ್ಮ ''ಕಾಲನೀಲಿ ನೀರು ಹಿಡಿಯೋವಾಗ, ಡಿಪೋ ಹತ್ತಿರ ಸಕ್ಕರೆ, ಅಕ್ಕಿ, ಸೀಮೆಎಣ್ಣೆಗೆ ಕ್ಯೂ ನಿಂತ್ಕೊಂಡಾಗ ಎಲ್ಲಾ ವಿಷ್ಯ ಮಾತಿಗೆ ಬರ್ತದೆ. ನಮ್ಮ ಅಟ್ಟಿತವ ಸಾಂತ ಕುಮಾರಿ ಅಂತ ಒಬ್ಬಳು ಅವಳೆ. ಅವಳು ಅದ್ಯಾರೋ ದೊಡ್ಡಗೋರಮೆಂಟ್ ಆಫೀಸರ್ ಮನೇಲಿ ಕೆಲಸ ಮಾಡ್ತಾಳೆ. ಬೆಳಗ್ಗೆ 6 ಘಂಟೇಗೋದರೆ ಬರೋದು ರಾತ್ರಿ ಎಂಟು ಆದರೂ ಆಯಿತು, ಒಂಬತ್ತು ಆದರೂ ಆಯಿತು. ಬರೋವಾಗ ಅವರ ಕಾರಿನಲ್ಲೇ ಬರ್ತಾಳೆ. ಅವಳಿಗೆ ನೀವು ಈಗಂದ್ರಲ್ಲ..., ಪೇಕಮೀಷನ್ನು ಅಂದೆ ನಾನು. ಹೂಂ ಆ ವಿಷಯ ತಿಳೀತಂತೆ. ಅವಳು ನಮಗೆ ಹೇಳಿದಳು, ಅಂದಳು ಗಂಗಿ.

ಅಮ್ಮೋರೆ, ಸಂಬಳ ಜಾಸ್ತಿ ಮಾಡೋದು ತಡ ಆಯ್ತದೆ ಅಂತ, ಅದೆಂತದೋ ಇಂಟೇರಿಯಂರಿಲೀಫು ಕೊಟ್ಟವರಂತೆ ಅಂದಳು. ಹೂಂ ಇಂಟೇರಿಯಂರಿಲೀಫು ಅಂದೆ ನಾನು. ತಲಾ ಸಾವಿರಕ್ಕಿಂತ ಹೆಚ್ಚು ಬರ್ತದಂತೆ ಅಂದಳು ಗಂಗಿ. ಸಂಬಳಕ್ಕೆ ತಕ್ಕಂಗೆ ಬರತ್ತೆ ಕಣೆ ಅಂದೆ. ನಿಮಗೆ ಐನೋರಿಗೆ ಅದು ಬಂದಿರ ಬೇಕಲ್ಲವರಾ? ಅಂದ್ಳು ಗಂಗಿ. ನಾನು ಹೂಂ ಅಂದೆ... ಯಾಕೋ ಮೂಲಕ್ಕೇ ಬರ್ತಾ ಇದೆ ಅಂತನ್ನಿಸಿತು, ಕೊಂಚ ಗಾಬರಿನೂ ಆಯಿತು ನಂಗೆ. ಆಂ ಆರು ತಿಂಗಳಿಗೊಂದಪ 'ತುಟಿಭತ್ಯೆ' 400-500 ಬರ್ತದಂತೆ ಅಂದಳು ಗಂಗಿ, ನಾನು ನಗ್ತಾ ಅದು ತುಟಿಭತ್ಯೆ ಅಲ್ಲ, ತುಟ್ಟಿಭತ್ಯೆ - ಅಂದರೆ ಪದಾರ್ಥಗಳ ಬೆಲೆ ಎಲ್ಲಾ ಜಾಸ್ತಿ ಆಗುತ್ತಾ ಇರುತ್ತಲ್ಲ ಅದಕ್ಕೆ ತಕ್ಕಂತೆ ಭತ್ಯೆ ಜಾಸ್ತಿ ಮಾಡ್ತಾರೆ. ಸಂಬಳ ಜಾಸ್ತಿಯಾಗೋದು 6-8 ವರ್ಷಕ್ಕೆ ಒಂದು ಸಾರ್ತಿ ಅಷ್ಟೇ ಅಂದೆ ನಾನು. ಅದರ ಜೊತ್ಗೆ ಅಮ್ಮಾವ್ರೆ ವರ್ಷ ವರ್ಷ ಅದೇನೋ ಇನ್‌ಕ್ರಿಮಿನ್ನು, 400-500, 600-700 ಹಂಗೆ ಕೆಲವರಿಗೆ ಇನ್ನೂ ಜಾಸ್ತಿ ಆಗುತ್ತಂತೆ ಹೂಂ ಹಂಗದ್ಲು ನಮ್ಮ ಸಾಂತಕುಮಾರಿ, ಅಂದ್ಲು ಗಂಗಿ. ಇನ್ಕ್ರಿಮಿನ್ ಅಲ್ಲವೇ ಇನ್‌ಕ್ರಿಮೆಂಟ್. ವರ್ಷಕ್ಕೆ ಒಂದೇ ಅಂತ ನಾನಂದೆ. ಅಮ್ಮಾವ್ರೆ ಒಂದೋ ಎರಡು ಮಕ್ಕಳಿದ್ದು ಫ್ಯಾಮಿಲಿಪ್ಲಾನಿಂಗ್ ಆಪರೇಸನ್ ಮಾಡಿಸಿಕೊಂಡಿದ್ರೆ ಅದ್ಕೂ ಇನ್ಕ್ರಿಮಿನ್ ಅಂತೆ, ಅಂದ್ಲು ಗಂಗಿ. ನಾನು ಹೂಂ ಅಂತ ತಲೆ ಆಡಿಸಿದೆ. ಅಮ್ಮಾವ್ರ, ನಿಮ್ಗೂ ಸಿಕ್ಕೈತ ಇಂತ ಇನ್ಕ್ರಿಮಿನ್ ಅಂದಾಗ ಗಂಗಿ, ನಾನು ನಾಚ್ಕೊಂಡು ನೆಲನೋಡ್ತ ತಲೆ ಆಡಿಸಿದೆ. ಸ್ವಂತ ಊರಿಗೆ ಹೋಗಿ ಬರಕ್ಕೆ, ರಜಾ ಹಾಕ್ಕೊಂಡು ದೂರದ ಊರು ನೋಡ್ಕೊಂಡು ಬರೋ ಖರ್ಚು ಕೊಡ್ತಾರಂತೆ,

ಆಮ್ಯಾಕೆ ಹಬ್ಬದ ಖರ್ಚಿಗೆ ಅಂತ ಮುಂಗಡ ಕೊಡ್ತಾರಂತೆ. ಅದ್ನ ಕಂತಲ್ಲಿ ಹಿಡ್ಕೊತಾರಂತೆ. ಹೂಂ ಅನ್ನುವಂತೆ ತಲೆ ಆಡಿಸಿದೆ. ನಿಮಗೆ, ಐನೋರಿಗೆ, ಮಕ್ಕಳಿಗೆ ಉಸಾರು ತಪ್ಪಿ – ಆಸ್ಪತ್ರೆ, ಔಷ್ಧ, ಇಂಜಿಕ್ಷನ್ನು ಅಂತ ಖರ್ಚಾದರೆ ಅದ್ನೂ ಸರ್ಕಾರಾನೇ ಕೊಡತದಂತೆ.

ಯಾರು ಏನೇ ಹೇಳ್ಲಿಕಣ್ರವ್ವ, ಇದ್ರೆ ಸರ್ಕಾರಿ ಕೆಲಸದಾಗಿರಬೇಕು. ನಿಮ್ಮಂಗೆ ದುಡಿಗಂಟ ಕೈತುಂಬ ಸಂಬಳ, 60 ವರ್ಷ ಆದಮ್ಯಾಗೆ ಕೈಗೆ ಲಕ್ಷ ಲಕ್ಷ, ಅದ್ನ ಬ್ಯಾಂಕಿನಾಗೆ ಮಡಗಿದ್ರೆ ಬಡ್ಡಿ, ಜೊತ್ಗೆ ತಿಂಗಳಾ ತಿಂಗಳಾ ಪಿಂಚಣಿ. ದೇವರ ತಲೆ ಮೇಲೆ ಹೂ ತಪ್ಪಿದರೂ ಇದ್ಯಾವುದೂ ತಪ್ಪಕ್ಕಿಲ್ಲ ಅಲ್ಲವ್ರಾ? ಗಂಗಿ ಪ್ರಶ್ನೆ ಇದಕ್ಕೆ ನನ್ನ ಮೌನವೇ ಉತ್ತರ.

ಅದೇ ನಾವೂ ಇದೀವಿ ನೋಡಿ ಹೆಬ್ಬೆಟ್ಟಿನವರು ಆಟಕ್ಕುಂಟು ಲೆಕ್ಕಕ್ಕಿಲ್ಲ. ಏನೇ ಆದ್ರೂ ಅಮ್ಮಾವ್ರೆ ನೀವು ತಿಳಿದೋರು ನಿಮಗೆ ನಾವು ಹೇಳಬೇಕಾ... ನಿಮಗೆ ಕೈತುಂಬ ಸಿಗೋವಾಗ, ನೀವು ನಮಗೂ ರವಷ್ಟು ಕೊಟ್ರೆ ನಾವು ನಿಮ್ಮ ಹೆಸರ ಹೇಳ್ಕೊಂಡು ಒಂದಿಷ್ಟು ಹಾಯಾಗಿರತೀವಿ. ಅಮ್ಮೋರೆ ವರ್ಷಕ್ಕೆ ಒಂದಪ ನಮ್ಮ ಊರು ಪಿರಿಯಾಪಟ್ಟಣಕ್ಕೆ ಹೋಗಿ ಬರೋ ಬಸ್ ಚಾರ್ಜು ಮತ್ತೆ 3 ದಿನ ರಜಾಕೊಟ್ಟು ಕಳಿಸಿ. ಹಂಗೇ ಹಬ್ಬಕ್ಕೆ ಅಡ್ವಾನ್ಸ್. ಗೌರಿ ಹಬ್ಬಕ್ಕೆ 500 ಕೊಟ್ಟು ಕಂತಲ್ಲಿ ಹಿಡ್ಕೊಳಿ. ಮತ್ತೆ ಅಮ್ಮೋವ್ರೆ, ನಾನು ನಿಮ್ಮಂಗೇ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಂಡಿವ್ನಿ. ನಂಗು ನಿಮ್ಮಂಗೇ 2 ಮಕ್ಕಳು. ಅದ್ಕೂ ಒಂದು ಇನ್ಕ್ರಿಮಿನ್. ನೀವು ತಗೊಂಡಂಗೆ ನಮಗೂ ಸಿಕ್ರೆ ಕೆಲಸ ಮಾಡಕ್ಕೆ ಖುಷಿ ಇರ್ತದೆ. ಅಮ್ಮಾವ್ರೆ, ನೀವು ಐನೋರ ಜೊತ್ಗೆ ಮಾತಾಡಿ ಆಮೇಲೆ ತೀರ್ಮಾನ ಹೇಳಿ ಅಂದ್ಲು ಗಂಗಿ.

ಅಮ್ಮಾವ್ರೆ ಇಷ್ಟೊತ್ತು ನಾನಾಡಿದ ಮಾತೆಲ್ಲಾ ನಮ್ಮ ಸಾಂತಂದೇಯ. ಅವಳು ಇಂಗೇ ಇಂಗೇ ಅಂತ ಎಲ್ಲರ್ಗಿಗೂ ಹೇಳಿಕೊಟ್ಟವಳೆ. ನಾವು ಅದ್ನೆ ಹೇಳಿದ್ದೀವಿ. ಸಂಘ ಮಾಡ್ಕೊಂಡು ಎಲ್ಲಾ ಹೋರಾಟ ಮಾಡಬೇಕು ಅಂತನೂ ಹೇಳವಳೆ ಸಾಂತಿ ಅಂತ ಹೇಳಿ ಗಂಗಿ ಅಮ್ಮಾವ್ರೆ, ಕಾಫಿ ಕೊಡೋದು ಮರತೇಬಿಟ್ರಿ ಅಂದ್ಲು, ಹೌದಲ್ವ ಇರು ಕೊಡ್ತೀನಿ ಅಂತ ಹೇಳಿ ಜಾಗ ಖಾಲಿ ಮಾಡಿದೆ. ಗೋಡೆ ಗಡಿಯಾರ ತಡವಾಯ್ತು ಅಂತ ಎಚ್ಚರಿಸ್ತು. ಕಾಫಿ ಮಾಡ್ತಾ ಇದ್ದ ಹಾಗೆ *We want.... We want....* ನ್ಯಾಯಬೇಕು... ಹೋರಾಟ... ಹೋರಾಟ... ಗೆಲ್ಲೋವರೆಗೂ ಹೋರಾಟ.. ಅಂತ ಕೂಗ್ತಾ ಕೈಯಲ್ಲಿದ್ದ ಕೆಂಪು ಬಾವುಟಾನ ಗಾಳಿಗೆ ಬೀಸೋರ ಮಧ್ಯೆ ನಿಂತ ಲೀಡರ್ ಥರ ಗಂಗಿ ಕಾಣಿಸಿದಳು ನನ್ನ ಮನಸ್ಸಿಗೆ. ಅವಳಿಗೆ ಉತ್ತರ *Positive...* ಆಗಿರಬೇಕು.. ಹೂಂ... ಯಾವುದಕ್ಕೂ ಇವರು ಟೂರ್ ಮುಗಿಸ್ಕೊಂಡ ಬಂದ ಕೂಡಲೆ ಅವರ ಜೊತೆ ಗಂಗಿಯ ಮಾತಿನ ಸಾರಾಂಶ ತಿಳಿಸಿ ಒಂದು *Settlement*ಗೆ ಬರಬೇಕು ಅಂತ ಹೇಳಿ ಗಂಗೀಗೆ ಕಾಫಿ ಕೊಟ್ಟು, ತಿಂಡಿ ಡಬ್ಬಿ, ಊಟದ ಡಬ್ಬಿ ಎರಡೂ ವ್ಯಾನಿಟಿ ಬ್ಯಾಗ್‌ಗೆ ಸೇರಿಸಿ ಹೊರಟೆ. ಗಂಗಿ ನನ್ನ ಹಿಂದೆ ಬಂದೋಳು ನನ್ನ ಹತ್ರ ಬೀಗದ ಕೈ ಇಸ್ಕೊಂಡು ಬೀಗ ಹಾಕಿ ಬೀಗದ ಕೈ ಕೊಡ್ತಾ ಸಂಜೆ ಬರ್ತೀನಿ ಪಾತ್ರೆ ತೊಳಿಯಕ್ಕೆ ಅಂತ ಹೇಳಿ ಒಂದು ಆಟೋ ನಿಲ್ಲಿಸಿ ನನ್ನ ಕೂಡಿಸಿ ಕಳಿಸಿದಳು.

●

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

## ಶ್ರೀಮಂತರ ಕಷ್ಟ

**ಹ**ಣಕಾಸಿಗೆ ಪರದಾಡುವಾಗ ಮನೆ, ಹೊಲಗದ್ದೆ, ಚಿನ್ನ ಹೀಗೆ ಆಸ್ತಿ ಮಾರುವುದು ಸಾಮಾನ್ಯ. ಕೆಲವೊಮ್ಮೆ ತಾಳಿಯನ್ನೇ ಮಾರಬೇಕಾದ ಹೀನ ಪರಿಸ್ಥಿತಿ ಒದಗಿ ಬರುತ್ತದೆ. ಆದರೆ ಈ ಘಟನೆ ಇನ್ನೂ ವಿಚಿತ್ರವಾದದ್ದು. ಈ ಮಹಾಶಯ ತನ್ನ ಒಡೆತನದಲ್ಲಿರುವ ಶಿಖರವನ್ನೇ ಮಾರಲು ಹೊರಟಿದ್ದಾನೆ. ಕಾರಣ? ತೆರಿಗೆ ಬಾಕಿ. ಸರ್ಕಾರಕ್ಕೆ ಕೊಡಬೇಕಿರುವ ಹಣ ಪಾವತಿ ಮಾಡಲು ಈ ಬ್ರಿಟಿಷ್ ಪ್ರಜೆ ತನ್ನ ಒಡೆತನದಲ್ಲಿರುವ 2850 ಅಡಿ ಎತ್ತರದ ಬೆಟ್ಟವನ್ನು ಮಾರಲು ಜಾಹೀರಾತು ನೀಡಿದ್ದಾನೆ. ಬೆಲೆ? ಈ ಬೆಟ್ಟ ಕೊಳ್ಳುವವರಿಗೆ ಅದರಲ್ಲಿ ವಾಸಿಸುತ್ತಿರುವ ಎಲ್ಲ ಪ್ರಾಣಿಗಳೂ ಉಚಿತವಾಗಿ ಸಿಗುತ್ತದಂತೆ! ಸುಮಾರು 400 ವರ್ಷಗಳಿಂದ ತಮ್ಮ ಕುಟುಂಬದ ಒಡೆತನದಲ್ಲಿರುವ ಈ ಆಸ್ತಿ ಮಾರಲು ಸುತಾರಾಂ ಇಷ್ಟವಿಲ್ಲ. ಆದರೆ ತನ್ನ ಶ್ರೀಮಂತ ತಂದೆ ಸತ್ತ ಮೇಲೆ ಅವರ ಆಸ್ತಿಗೆ ಇವರು ಒಡೆಯರಾದ್ದರಿಂದ ಈಗ ಇನ್‌ಹೆರಿಟನ್ಸ್ ತೆರಿಗೆ ತುಂಬಾ ಬೇಕಿದೆ. ಅದಕ್ಕಾಗಿ ಈ ಮಾರಾಟ. ಅಂದಹಾಗೆ ಇದೇ ಜುಲೈ 2 ರವರೆಗೂ ಕಾಲಾವಕಾಶವಿದೆ ಹರಾಜಿನಲ್ಲಿ ಭಾಗವಹಿಸಲು. ಕನಿಷ್ಠ ದರ: 17.5 ಲಕ್ಷ ಪೌಂಡ್. ಪಾಪ, ಶ್ರೀಮಂತರ ಕಷ್ಟ ನಮಗೆ ಅರ್ಥವಾಗುವುದಾದರೂ ಹೇಗೆ?

★★★

## ಸಾಧ್ಯವೆ?

**ಮೈ**ಸೂರಿನ ಪೊಲೀಸರು ಪಾನಮತ್ತರಿಗೆ ಒಂದು ವಿಶೇಷ ಸೌಲಭ್ಯ ಕಲ್ಪಿಸಿದ್ದಾರಂತೆ. ಅದೇನೆಂದರೆ ಟೈಟಾಗಿ ಮನೆಗೆ ಹೋಗಬೇಕಾದ ಸಂದರ್ಭ ಒದಗಿ ಬಂದಾಗ ತಮಗೆ ಫೋನ್ ಮಾಡಿದರೆ ಅವರನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತಾರಂತೆ. ಇದರಿಂದ ಅವರು ಸಿಕ್ಕಿ ಬೀಳುವುದು ಅಥವಾ ಅಪಘಾತಕ್ಕೀಡಾಗುವುದು ತಪ್ಪುತ್ತದೆ. ಪ್ರಿವೆನ್‌ಷನ್ ಈಸ್ ಬೆಟರ್ ದಾನ್ ಕ್ಯೂರ್. ನಿಜವೇ. ಆದರೆ ನಮ್ಮ ಸಂದೇಹ ಏನೆಂದರೆ ಕುಡಿದು ಟೈಟಾಗಿರುವವನು ಫೋನ್ ಮಾಡಿ ಹೇಳಲು ಸಾಧ್ಯವೆ?

★★★

## ಸಂಖ್ಯಾ ಮೋಹ

**ಕಾ**ರಿನ ಮೇಲಿನ ಮೋಹ ಅರ್ಥವಾಗುತ್ತದೆ. ಆದರೆ ರಿಜಿಸ್ಟ್ರೇಷನ್ ಸಂಖ್ಯೆಯ ಮೇಲೆ ಮೋಹ ಎಂದರೆ? ತಮಗೆ ಬೇಕಾದ ಸಂಖ್ಯೆಗೆ ಇಲಾಖೆ ಕೇಳಿದಷ್ಟು ಹಣ ಕೊಡುವುದೆಂದರೆ?

ಅದೂ ಎಷ್ಟು? ಬರೋಬ್ಬರಿ 12 ಲಕ್ಷ. ತಾಳಿ ತಾಳಿ ಅದು ಕಾರಿನ ಬೆಲೆ ಅಲ್ಲ, ರಿಜಿಸ್ಟ್ರೇಷನ್ ಸಂಖ್ಯೆಯ ಬೆಲೆ. ಹೌದು ಸ್ವಾಮಿ ಮುಂಬೈನ ವ್ಯಾಪಾರಿಯೊಬ್ಬರು ಅಷ್ಟು ಹಣ ಕೊಟ್ಟು ತಮಗೆ ಬೇಕಾದ ಸಂಖ್ಯೆ ಪಡೆದುಕೊಂಡಿದ್ದಾರೆ. ಆ ಸಂಖ್ಯೆ ಕೇವಲ 1. ಆದರೇನಂತೆ ಅದಕ್ಕೇ ಅವರು ಅಷ್ಟು ಹಣ ತುಂಬಿದ್ದಾರೆ. ಮಾಮೂಲಿ ಸರಣಿಯಲ್ಲಿ ನಿಮಗೆ ಬೇಕಾದ ಸಂಖ್ಯೆ ಕೇಳಿದರೆ ಅದಕ್ಕೆ ಶುಲ್ಕ 4 ಲಕ್ಷ. ಆದರೆ ಈಗಿರುವ ಸರಣಿಯೆಲ್ಲ ಮುಗಿದಿದ್ದು ಹೊಸ ಸರಣಿಯಿಂದ 1 ನಂಬರ್ ಕೊಡಬೇಕಾಗಿರುವುದರಿಂದ ಶುಲ್ಕ ಮೂರುಪಟ್ಟು ಹೆಚ್ಚಿಸಲಾಗಿದೆ. ಅದಕ್ಕೆ ಈ ಕಾರ್ ಪತಿ ತಯಾರ್.

★★★

## ತಿನ್ನುವ ಬಾಟಲಿ

**ಕೋ**ನ್ ಐಸ್ಕ್ರೀಂ ತಿಂದ ಮೇಲೆ ನಿಮ್ಮ ಕೈನಲ್ಲಿ ಏನು ಉಳಿದಿರುತ್ತದೆ? ಅಲ್ಲಲ್ಲಿ ಮೆತ್ತುಕೊಂಡಿರುವ ಐಸ್ಕ್ರೀಂ ಕುರುಹುಗಳು ಅಷ್ಟೆ ಅಲ್ಲವೆ? ಏಕೆಂದರೆ ಆ ಐಸ್ಕ್ರೀಂ ಹಿಡಿದಿಟ್ಟಿದ್ದ ಕೋನ್ ಸಹ ತಿನ್ನಲು ಯೋಗ್ಯ. ಹಾಗಾಗಿ ಅದು ಸಹ ಹೊಟ್ಟೆ ಸೇರಿರುತ್ತದೆ. ಆದರೆ ಕಪ್ ಐಸ್ಕ್ರೀಂ ತಿಂದಾಗ? ಕಪ್ ನಿಮ್ಮ ಕೈಯಲ್ಲೇ ಇರುತ್ತದೆ. ಅದರಂತೆ ಬಾಟಲಿ ನೀರು ಕುಡಿದ ಮೇಲೆ ಆ ಬಾಟಲ್ ಎಸೆಯಲೇ ಬೇಕಲ್ಲವೆ? ಹಾ! ತಾಳಿ ನೀರು ಕುಡಿದ ಮೇಲೆ ಆ ಬಾಟಲನ್ನೂ ಸ್ವಾಹ ಮಾಡಬಹುದಾದಂತಹ ದಿನಗಳು ಬರಲಿವೆಯಂತೆ. ತಿನ್ನಲರ್ಹವಾದ ಪ್ಲಾಸ್ಟಿಕ್‌ನಿಂದ ತಯಾರಾದ ಬಾಟಲಿಯಲ್ಲಿ ನೀರು ಮಾರಾಟವಾಗಲಿದೆ ಎಂದು ಸುದ್ದಿ. ಇದರಿಂದ ಆ ಬಾಟಲಿಗಳು ಎಲ್ಲೆಡೆ ಬಿದ್ದು ಪರಿಸರ ಮಾಲಿನ್ಯ ತಡೆಗಟ್ಟಬಹುದು ಎಂದಿದ್ದರೂ ಪಾಪ ಅದನ್ನು ಆಯ್ದು ಮಾರಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಹುಡುಗರಿಗೆ ನಷ್ಟ ಅಲ್ಲವೆ?

★★★

## ಆ ರೈಲು, ನಮ್ಮ ರೈಲು

**ಚೀ**ನಾದಿಂದ ಅಮೆರಿಕಕ್ಕೆ ರೈಲು ಓಡಿಸಲು ಯೋಜನೆ ಹಾಕಲಾಗಿದೆ. ತಾಸಿಗೆ 350 ಮೈಲಿ ವೇಗದಲ್ಲಿ ಸಾಗರದ ತಳದಲ್ಲಿ ನಿರ್ಮಿಸಿದ ದೊಡ್ಡ ಸುರಂಗ ಕ್ರಮಿಸಿ, ಬೆಟ್ಟಗುಡ್ಡ ಪರ್ವತಗಳನ್ನು ಹಾದು 13,000 ಕಿಮೀ ದೂರದ ಪಯಣವನ್ನು ಕೇವಲ ಎರಡು ದಿನಗಳಲ್ಲಿ ಮುಗಿಸುವ ಕನಸು ಚೀನಾದ್ದು. ಅದು ಸರಿ, ನಮ್ಮ ಮೈಸೂರು-ಬೆಂಗಳೂರು ಜೋಡಿ ಮಾರ್ಗ ಎಂದು ಮುಗಿಯುತ್ತದೆ ಹೇಳಿ ಸ್ವಾಮಿ ಎಂದು ನೀವು ಕೇಳಿದರೆ ನಮ್ಮ ಉತ್ತರ: ಜಿ.ಒ.ಕೆ. ಅಂದರೆ ಗಾಡ್ ಓನ್ಲಿ ನೋಸ್. ಅವನಿಗೆ ಗೊತ್ತಿರಬಹುದು ಎನ್ನುತ್ತೀರಾ? ಆದರೆ ನೋಸ್‌ನಲ್ಲಿ 'ನೊ' ಇದೆ ಆದುದರಿಂದ...

●